ಅಧ್ಯಾತ್ಮಗ್ರಂಥಾವಳಿ

# ಶಿವನಾಮಾಷ್ಟೋತ್ತರಶತಕ

( ಕನ್ನಡದ ಟೀಕೆಯೊಡನೆ )

ಬರೆದವರು :

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೭೪

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

1992

ಮೊದಲನೆಯ ಮುದ್ರಣ 1943
ಎರಡನೆಯ ಮುದ್ರಣ 1967
ಮೂರನೆಯ ಮುದ್ರಣ 1992
೨೦೦೦ ಪ್ರತಿಗಳು

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
( All Rights Reserved )

ಮುದ್ರಣಸ್ಥಾನ :
ಅಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.
1992

# ಪೀಠಿಕೆ

ಸ್ಕಾಂದಪುರಾಣದಲ್ಲಿ ಸನತ್ಕುಮಾರೀಯಸಂಹಿತೆ, ಸೂತಸಂಹಿತೆ, ಬ್ರಾಹ್ಮಸಂಹಿತೆ, ವೈಷ್ಣವಸಂಹಿತೆ, ಶಾಂಕರಸಂಹಿತೆ, ಸೌರಸಂಹಿತೆ- ಎಂಬ ಆರು ಸಂಹಿತೆಗಳಿವೆ. ಐದನೆಯದಾದ ಶಾಂಕರಸಂಹಿತೆಯ ಶಿವರಹಸ್ಯದಲ್ಲಿ ಗೌರೀನಾರಾಯಣಸಂವಾದರೂಪವಾಗಿರುವದು ಈ ಶಿವನಾಮಾಷ್ಟೋತ್ತರ ಶತಕವು.

ಶಿವವಿಷ್ಣುಗಳಲ್ಲಿ ಪರಮತ್ತ್ವವು ಯಾರದೆಂದು ಚರ್ಚಿಸುವ ಕಾಲವೊಂದಿತ್ತು. ಆಗ್ಗೆ ಅನೇಕರು ವೈಷ್ಣವಪುರಾಣಗಳೇ ಪ್ರಮಾಣವೆಂದೂ ಶೈವಪುರಾಣಗಳು ಅದಕ್ಕೆ ವಿರುದ್ಧವಲ್ಲದಷ್ಟುಮಟ್ಟಿಗೆ ಪ್ರಮಾಣವೆಂದೂ ಹೇಳುತ್ತಿದ್ದರು. ಈ ಅಭಿಪ್ರಾಯಕ್ಕೆ ಕೊಟ್ಟಿರುವ ಕಾರಣಗಳನ್ನು ಒಂದೊಂದಾಗಿ ವಿಮರ್ಶೆಮಾಡಿ ಶಿವಪುರಾಣದಮೇಲೆ ವೈಷ್ಣವಪುರಾಣದ ಭಕ್ತರು ಹಾಕುವ ದೋಷಗಳು ಅದೇ ದೃಷ್ಟಿಯಿಂದ ಎರಡಕ್ಕೂ ಹತ್ತುತ್ತವೆಯೆಂದೂ ನಿಜವಾಗಿ ನೋಡಿದರೆ ಎರಡೂ ನಿರ್ದುಷ್ಟವಾಗಿರುವದರಿಂದ ಎರಡೂ ಪ್ರಮಾಣವೇ ಎಂದೂ ಸ್ಥಾಪಿಸುವದಕ್ಕಾಗಿ ನೀಲಕಂಠದೀಕ್ಷಿತರೆಂಬುವರು ಈ ಅಷ್ಟೋತ್ತರಶತಕಕ್ಕೆ ಬರೆದಿರುವ ಶಿವತತ್ತ್ವರಹಸ್ಯವೆಂಬ ವ್ಯಾಖ್ಯಾನದ ಆದಿಯಲ್ಲಿ ಒಂದು ದೀರ್ಘವಾದ ವಿಚಾರವನ್ನು ಮಾಡಿರುತ್ತಾರೆ. ಆ ದೀಕ್ಷಿತರು ತಮ್ಮ ವಿಚಾರದ ಕೊನೆಯಲ್ಲಿ ಹೇಳಿರುವಂತೆ ಶೈವವೈಷ್ಣವರು ಈ ವಿಷಯದಲ್ಲಿ ಬಡಿದಾಡುವದು ವ್ಯರ್ಥವಾದದ್ದು; ಇದು 'ಸೊಳ್ಳೆಯ ಬೇಟೆ' ಎಂದು ಅವರು ಹೇಳಿರುತ್ತಾರೆ. ಸೊಳ್ಳೆಯ ಬೇಟೆಯಲ್ಲಾದರೂ ಆರೋಗ್ಯದೃಷ್ಟಿಯಿಂದ ಪ್ರಯೋಜನವಿರಬಹುದು, ಆದರೆ ಈ ಚರ್ಚೆಯಿಂದ ಯಾವ ಪ್ರಯೋಜನವೂ ಇಲ್ಲ ; ಅಥವಾ ಶಿವವಿಷ್ಣು ದೂಷಣೆಯಿಂದ ಬರುವ ಪಾಪಫಲವನ್ನುಣ್ಣುವ ದುಷ್ಪ್ರಯೋಜನವೊಂದುಂಟೆಂದು ಬೇಕಾದರೆ ಹೇಳಬಹುದು. ಆದ್ದರಿಂದ ಒಂದೇ ಪರತತ್ತ್ವವು ಬ್ರಹ್ಮವಿಷ್ಣುರುದ್ರಾದಿರೂಪದಿಂದ ಆಯಾ ಭಕ್ತರಿಗೆ ಉಪಾಸ್ಯವಾಗಿರುವದೆಂದೂ ತದೇಕನಿಷ್ಠೆಯಿಂದ ಉಪಾಸನೆಮಾಡುವವರಿಗೆ ಒಂದೇ ಪರಗತಿಯು ಪ್ರಾಪ್ತಿಯಾಗುವದೆಂದೂ ನಂಬುವವರ ಉತ್ಕೃಷ್ಟದೃಷ್ಟಿಯಿಂದಲೇ ನಾನು ಈ ಅಷ್ಟೋತ್ತರಶತನಾಮದ ಸ್ತೋತ್ರವನ್ನು ಕನ್ನಡಿಸಿರುತ್ತೇನೆ.

ನೀಲಕಂಠದೀಕ್ಷಿತರು ಬರೆದಿರುವ 'ಶಿವತತ್ತ್ವರಹಸ್ಯ'ವು ಸಂಸ್ಕೃತದಲ್ಲಿ ಶ್ರೀರಂಗದ ಶ್ರೀವಾಣೀವಿಲಾಸಮುದ್ರಾಯಂತ್ರದಲ್ಲಿ ಅಚ್ಚಾಗಿ ಪ್ರಕಟವಾಗಿರುತ್ತದೆ. ಅದನ್ನು ಓದುವ ಶಿವಭಕ್ತರಿಗೆ ಹೆಚ್ಚಿನ ಪ್ರಯೋಜನವುಂಟು. ಆ ದೀಕ್ಷಿತರು ಶ್ರೀಮದಪ್ಪಯ್ಯದೀಕ್ಷಿತರ ಸಹೋದರರಾದ ಶ್ರೀಮದಚ್ಚಾನ್ ದೀಕ್ಷಿತರ ಮೊಮ್ಮಕ್ಕಳೆಂದೂ ಶ್ರೀ|| ನಾರಾಯಣದೀಕ್ಷಿತರ ಮಕ್ಕಳೆಂದೂ ತಿಳಿಯಬರುತ್ತದೆ. ಅವರು ಕುಲಕ್ರಮಾಗತವಾಗಿ ಉಪದೇಶಪರಂಪರೆಯಿಂದ ಬಂದ ಶಿವದೀಕ್ಷೆಯನ್ನು ವಹಿಸಿದವರು ; ವೈದಿಕವಾಙ್ಮಯದಲ್ಲಿಯೇ ಅಲ್ಲದೆ ಆಗಮಗಳ ರಹಸ್ಯದಲ್ಲಿಯೂ ನಿಷ್ಣಾತರಾದವರು– ಎಂದು ಶಿವತತ್ತ್ವರಹಸ್ಯದಿಂದ ತಿಳಿಯಬರುತ್ತದೆ. ಆ ಗ್ರಂ ಥ ದ ಲ್ಲಿ ರು ವ ವ್ಯಾಕರಣವಿಚಾರವೇ ಮುಂತಾದ ವಿವರಗಳನ್ನು ಬಿಟ್ಟು ಮಿಕ್ಕದ್ದರ ಸಾರವನ್ನು ಸಂಗ್ರಹಿಸಿ ಈ ಕನ್ನಡಟೀಕೆಗೆ ಉಪಯೋಗಿಸಿಕೊಂಡಿರುತ್ತೇನೆ.

ಶಿವಾಷ್ಟೋತ್ತರಶತನಾಮಸ್ತೋತ್ರವನ್ನು ಪಠಿಸುವದರಿಂದಾಗುವ ಫಲವನ್ನೂ ನಾಮಾವಳಿಯಿಂದ ಶಿವನನ್ನು ಅರ್ಚಿಸುವದರಿಂದಾಗುವ ಫಲವನ್ನೂ ಸ್ತೋತ್ರದ ಕೊನೆಯಲ್ಲಿ ಕೊಟ್ಟಿದೆ. ಇದರಿಂದ ಶಿವನಾಮದ ಮಹಿಮೆಯನ್ನು ನಾವು ಮನಗಾಣಬಹುದು. ಇಂದಿಗೂ ಈ ಸ್ತೋತ್ರವನ್ನು ಭಕ್ತಿಯಿಂದ ಹೇಳಿಕೊಳ್ಳುವ ಮತ್ತು ಶಿವಾರ್ಚನೆಗೆ ಸಾಧನವಾಗಿ ಮಾಡಿಕೊಂಡಿರುವ ಭಕ್ತರು ಬಹುಜನರು ಇರುತ್ತಾರೆ. ಅಂಥವರಿಗೆ ನಾಮಗಳ ಅರ್ಥದ ಅನುಸಂಧಾನವನ್ನು ಮಾಡಿಕೊಳ್ಳುವದಕ್ಕೆ ಈ ಅಲ್ಪಪ್ರಯತ್ನವು ಉಪಯೋಗಕ್ಕೆ ಬರಬಹುದೆಂದು ನಂಬಿರುತ್ತೇನೆ. ಪು ರಾ ಣ ಗ ಳ ಲ್ಲಿ ತತ್ತ್ವಾರ್ಥವನ್ನು ಸ್ತೋತ್ರಾದಿಗಳ ಮೂಲಕ ಹೇಗೆ ತಿಳಿಸುವರೆಂಬುದನ್ನು ನೋಡುವ ಕುತೂಹಲವುಳ್ಳ ವಿಮರ್ಶಕರಿಗೂ ಇದರಿಂದ ಸ್ವಲ್ಪಮಟ್ಟಿಗಾದರೂ ಪ್ರಯೋಜನವಾದರೆ ಈ ಕನ್ನಡಟೀಕೆಯ ಪ್ರಯತ್ನವು ಸಫಲವಾದಂತೆಯೇ ಸರಿ.

ಗ್ರಂಥಕರ್ತ.

|| ಓಂ ||

ಶಿವಃ ಶರಣಮ್

# ಶಿವನಾಮಾಷ್ಟೋತ್ತರ ಶತಕ

## ಪೀಠಿಕೆ

ಪಾರ್ವತ್ಯುವಾಚ—

ಶರೀರಾರ್ಧಮಹಂ ಶಮ್ಭೋರ್ಯೇನ ಪ್ರಾಪ್ಸ್ಯಾಮಿ ಕೇಶವ ।
ತದಿದಾನೀಂ ಮಮಾಚಕ್ಷ್ವ ಸ್ತೋತ್ರಂ ಶೀಘ್ರಫಲಪ್ರದಮ್ ॥ ೧॥

೧. ಪಾರ್ವತೀದೇವಿಯಿಂತೆಂದಳು ; ಎಲೈ ಕೇಶವನೆ, ಶಂಭುವಿನ ಶರೀರದಲ್ಲಿ ಅರ್ಧವನ್ನು ನಾನು ಹೇಗಾದರೆ ಪಡೆದೇನು ? ಅಂಥ ಶೀಘ್ರವಾಗಿ ಫಲವನ್ನು ಕೊಡುವ ಸ್ತೋತ್ರವನ್ನು ಈಗ ನನಗೆ ಹೇಳು.

### ವಿವರಣೆ

ಈಗ ನಾವು ವ್ಯಾಖ್ಯಾನಮಾಡುತ್ತಿರುವ ಸ್ತೋತ್ರವು ಶ್ರೀ ನಾರಾಯಣ ನಿಂದ ಪಾರ್ವತೀದೇವಿಗೆ ಉಪದಿಷ್ಟವಾದದ್ದು. ಈ ಸ್ತೋತ್ರದ ಫಲವಾಗಿ ದೇವಿಗೆ ಶಂಭುವಿನ ದೇಹಾರ್ಧವೇ ಪ್ರಾಪ್ತವಾಯಿತೆಂಬುದರಿಂದ ಇದರ ಮಾಹಾತ್ಮ್ಯವು ಪ್ರಕಟವಾಗುತ್ತದೆ. ಮಹೇಶ್ವರನ ಇಪ್ಪತ್ತೈದು ಮೂರ್ತಿ ಗಳಲ್ಲಿ 'ಶಂಕರನಾರಾಯಣ' ಎಂಬುದು ಹದಿಮೂರನೆಯದೆಂದು ಆಗಮ ಗಳಲ್ಲಿ ಪ್ರಸಿದ್ಧವಾಗಿರುತ್ತದೆ. ಅಂಥ ಸ್ವರೂಪವನ್ನು ಪಡೆದ ನಾರಾಯಣನೆ, ನನಗೆ ಆ ಶಂಭುವಿನ ಶರೀರದಲ್ಲಿ ಅರ್ಧವನ್ನು ಪಡೆದುಕೊಳ್ಳುವದಕ್ಕೆ ಸಾಧನ ವಾದ ಸ್ತೋತ್ರವನ್ನು ಹೇಳು–ಎಂದು ಶ್ರೀಗೌರಿಯು ಕೇಳಿಕೊಂಡಿರುತ್ತಾಳೆ.

ನಾರಾಯಣ ಉವಾಚ—

ಅಸ್ತಿ ಗುಹ್ಯತಮಂ ಗೌರಿ ನಾಮ್ನಾಮಷ್ಟೋತ್ತರಂ ಶತಮ್ ।
ಶಮ್ಭೋರಹಂ ಪ್ರವಕ್ಷ್ಯಾಮಿ ಪಠತಾಂ ಶೀಘ್ರಕಾಮದಮ್ ॥೨॥

೨. ಶ್ರೀ ನಾರಾಯಣನಿಂತೆಂದನು : ಎಲೌ ಗೌರಿಯೆ, ಶಂಭುವಿನ ನಾಮಗಳಲ್ಲಿ ಅಷ್ಟೋತ್ತರಶತಸಂಖ್ಯೆಯ ನಾಮಗಳುಳ್ಳ ಅತ್ಯಂತಗುಹ್ಯವಾದ ಸ್ತೋತ್ರವೊಂದಿರುವದು. ಪಠಿಸುವವರಿಗೆ ಅದು ಶೀಘ್ರವಾಗಿ ಅಭೀಷ್ಟವನ್ನು ಕೊಡುವದು.

## ವಿವರಣೆ

ಲೋಕದಲ್ಲಿ ಹೆಸರುಗಳು ಆಯಾ ವಸ್ತುಗಳ ಗುಣವನ್ನು ಹೇಳುವದಿಲ್ಲ; ಅವು ಬರಿಯ ಸಂಕೇತಗಳಾಗಿರುತ್ತವೆ. ಆದರೆ ಇಲ್ಲಿ ಹೇಳಿರುವ ನೂರೆಂಟು ನಾಮಗಳಲ್ಲಿ ಯೌಗಿಕಾರ್ಥವೇ ಮುಖ್ಯವಾಗಿರುತ್ತದೆ. ಇವು ಪರಮೇಶ್ವರನ ಗುಣಗಳನ್ನು ತಿಳಿಸುತ್ತವೆ. ಈ ಕಾರಣದಿಂದ ಇವುಗಳು ಸ್ತೋತ್ರರೂಪವಾಗಿರುತ್ತವೆ.

ಈ ಸ್ತೋತ್ರರೂಪವಾಗಿರುವ ನಾಮಗಳು ಗುಹ್ಯತಮವಾಗಿವೆ-ಎಂದು ಹೇಳಿರುವದೇಕೆಂದರೆ: ಶ್ರುತಿಸ್ಮೃತಿಗಳ ರಹಸ್ಯಾರ್ಥವೆಲ್ಲವೂ ಇವುಗಳಲ್ಲಿ ಅಡಗಿರುತ್ತದೆ. "ನಾಮಾಷ್ಟೋತ್ತರಶತವೆಂಬ ಸ್ತೋತ್ರವೊಂದುಂಟು" ಎಂದು ಹೇಳಿರುವದು 'ನಾನು ಇನ್ನುಮೇಲೆ ಕಲ್ಪಿಸಬೇಕಾಗಿರುವ ನಾಮಗಳಲ್ಲ, ಇವು ಆಗಲೇ ಶ್ರುತಿಸ್ಮೃತಿಪ್ರಸಿದ್ಧವಾಗಿರುತ್ತವೆ. ನಾನು ಈಗ ಮೊದಲು ಇವನ್ನು ಹೇಳಿ ಈ ಅಷ್ಟೋತ್ತರಶತನಾಮಗಳಿಗೆ ಸಂಪ್ರದಾಯಪ್ರವರ್ತಕನಾಗಿರುವೆನೇ ಹೊರತು ನಾನೇನೂ ಇವನ್ನು ಕಲ್ಪಿಸಿರುವದಿಲ್ಲ'- ಎಂದು ತಿಳಿಸುವದಕ್ಕೆ. ಆದ್ದರಿಂದ ಶ್ರುತಿಸ್ಮೃತಿಪ್ರಸಿದ್ಧವಾಗಿರುವ ನಾಮಗಳನ್ನೇ ಇಲ್ಲಿ ಸಂಗ್ರಹಿಸಿ ನಾರಾಯಣನು ಹೇಳುತ್ತಿರುವದರಿಂದ ಇದನ್ನು ಪಠಿಸುವವರಿಗೆ ಸಕಲಶಾಸ್ತ್ರರಹಸ್ಯನಾಗಿರುವ ಪರಮೇಶ್ವರನ ಗುಣಗಳನ್ನು ಕೊಂಡಾಡಿದ ಫಲವೇ ದೊರಕುವದು-ಎಂದು ಸೂಚಿಸಿದಂತಾಯಿತು.

ಅಸ್ಯ ಶ್ರೀಶಿವನಾಮಾಷ್ಟೋತ್ತರಶತಮಹಾಮನ್ತ್ರಸ್ಯ ನಾರಾಯಣ ಋಷಿಃ । ಅನುಷ್ಟುಪ್ ಛನ್ದಃ । ಸದಾಶಿವೋ ದೇವತಾ । ಶ್ರೀಸದಾಶಿವಪ್ರೀತ್ಯರ್ಥೇ ಪಾಠೇ ವಿನಿಯೋಗಃ ॥

## ವಿವರಣೆ

ಈ ಮಂತ್ರವನ್ನು ಶ್ರೀಮನ್ನಾರಾಯಣನು ಮೊಟ್ಟಮೊದಲು ಹೇಳಿರುವದರಿಂದ ಆತನೇ ಇದಕ್ಕೆ ಋಷಿಯು. ಎಂಟಕ್ಷರದ ಪಾದಗಳುಳ್ಳ ಅನುಷ್ಟುಪ್ಪು ಎಂಬುದೇ ಛಂದಸ್ಸು, ಸದಾಶಿವನೇ ದೇವತೆ. ಶಿವನನ್ನು ಕಾರಣರೂಪನೆಂದೂ ಮಹೇಶ್ವರನನ್ನು ಕಾರ್ಯರೂಪನೆಂದೂ ಆಗಮಿಕರು ಭಾವಿಸುತ್ತಾರೆ. ಅವರ ಮತದಂತೆ ಅರ್ಧನಾರೀಶ್ವರನೆಂಬ ಮೂರ್ತಿಯೂ ಮಹೇಶ್ವರವ್ಯೂಹದಲ್ಲಿಯೇ ಸೇರಿರುತ್ತದೆ. ಆದರೂ ನಿಷ್ಕಲನಾದ ಶಿವರೂಪದಿಂದಲೂ ಸಕಲನಾದ ಮಹೇಶ್ವರನ ರೂಪದಿಂದಲೂ ಸಕಲನಿಷ್ಕಲರೂಪನಾದ ಸದಾಶಿವನನ್ನೇ ಇಲ್ಲಿ ಸ್ತೋತ್ರಮಾಡಿರುತ್ತದೆ- ಎಂದು ಆಗಮವನ್ನು ಬಲ್ಲವರು ಹೇಳುತ್ತಾರೆ. ಅಂಥ ಸದಾಶಿವನ ಪ್ರೀತಿಯಾಗುವದಕ್ಕಾಗಿ ಈ ಸ್ತೋತ್ರವನ್ನು ಪಾಠಮಾಡಬೇಕು.

ಅಥ ಧ್ಯಾನಮ್—

ಧವಲವಪುಷಮಿನ್ದೋರ್ಮಣ್ಡಲೇ ಸನ್ನಿವಿಷ್ಟಂ
ಭುಜಗವಲಯಹಾರಂ ಭಸ್ಮದಿಗ್ಧಾಙ್ಗಮೀಶಮ್ ।
ಹರಿಣಪರಶುಪಾಣಿಂ ಚಾರುಚನ್ದ್ರಾರ್ಧಮೌಲಿಂ
ಹೃದಯಕಮಲಮಧ್ಯೇ ಸನ್ತತಂ ಚಿನ್ತಯಾಮಿ ॥ ೩ ॥

೩. ಶುಭ್ರವಾದ ಶರೀರವುಳ್ಳಾತನೂ, ಚಂದ್ರಮಂಡಲವಲ್ಲಿರುವಾತನೂ, ನಾಗರೂಪವಾದ ಹಾರವನ್ನು ಧರಿಸಿರುವಾತನೂ, ವಿಭೂತಿಯನ್ನು ಬಳಿದ ಶರೀರವುಳ್ಳಾತನೂ, ಜಿಂಕೆ, ಪರಶು- ಇವುಗಳನ್ನು ಕೈಯಲ್ಲಿ ಧರಿಸಿರುವಾತನೂ ಮನೋಹರವಾದ ಅರ್ಧಚಂದ್ರನನ್ನು ಶಿರಸ್ಸಿನಲ್ಲಿಟ್ಟುಕೊಂಡಿರುವಾತನೂ ಆಗಿರುವ ಈಶ್ವರನನ್ನು ಹೃದಯಕಮಲಮಧ್ಯದಲ್ಲಿ ಯಾವಾಗಲೂ ಚಿಂತಿಸುತ್ತೇನೆ.

## ವಿವರಣೆ

ಧ್ಯಾನಮಾಡುವ ಮೂರ್ತಿಯ ಶಿರಸ್ಸು, ಮುಖ, ಹೃದಯ-ಇವುಗಳಿಗೆ ಅಂಗಗಳೆಂದು ಹೆಸರು. ಎದೆ, ಕತ್ತು, ಮೊಲೆಗಳು, ತೋಳುಗಳು, ಹೊಕ್ಕುಳು,

ಗುಹ್ಯ, ಹೊಟ್ಟೆ, ಕಣ್ಣು, ಬಾಯಿ, ಕಿವಿ, ಕೈಕಾಲುಬೆರಳುಗಳು, ತೊಡೆಗಳು, ಮೊಳಕಾಲುಗಳು, ಕೀಳ್ಕಾಲುಗಳು–ಇವಕ್ಕೆ ಪ್ರತ್ಯಂಗಗಳೆಂದು ಹೆಸರು. ವಸ್ತ್ರ, ಉಪವೀತ, ಮಾಲೆ, ಗಂಧ, ಆಭರಣ, ಆಸನ, ಆವರಣ–ಇವುಗಳಿಗೆ ಉಪಾಂಗಗಳೆಂದು ಹೆಸರು. ಇಲ್ಲಿ ಹೇಳಿರುವ ಧ್ಯಾನಸ್ತೋತ್ರದಲ್ಲಿ ಇವುಗಳನ್ನೆಲ್ಲ ಸೂಚಿಸಿರುತ್ತದೆ. ಹೇಗೆಂದರೆ : 'ಹರಿಣಪರಶುಪಾಣಿಮ್' ಎಂದದ್ದರಿಂದ ಗುಣರೂಪವಾದ ಸಾಂಗವನ್ನು ಹೇಳಿದಂತೆ ಆಯಿತು ; ಏಕೆಂದರೆ 'ಪರಶು' ಎಂಬುದು ಶಕ್ತಿ ಎಂಬ ಗುಣವನ್ನು ತಿಳಿಸುತ್ತದೆ. ನಾಗಹಾರದಿಂದ ಹಾರ, ಭಸ್ಮದಿಂದ ಅಂಗರಾಗರೂಪವಾದ ಗಂಧ, ಇಂದುಮಂಡಲವೆಂಬ ಮಾತಿನಿಂದ ಆಸನ, ಚಂದ್ರಾರ್ಧಮೌಲಿ ಎಂಬ ಮಾತಿನಿಂದ ಭೂಷಣ– ಹೀಗೆ ಉಪಾಂಗಗಳನ್ನು ಹೇಳಿದಂತೆ ಆಯಿತು. 'ಧವಲವಪುಷಮ್'– ಎಂಬ ಮಾತಿನಿಂದ ಅಂಗಪ್ರತ್ಯಂಗಗಳನ್ನು ಸೂಚಿಸಿದಂತೆ ಆಯಿತು. ಸದಾಶಿವನಿಗೆ ಹತ್ತು ಭುಜಗಳಾದರೂ ಜಪಕಾಲದಲ್ಲಿ ನಾಲ್ಕುನಾಲ್ಕು ಭುಜಗಳನ್ನು ಇಲ್ಲಿ ಸೂಚಿಸಿರುತ್ತದೆ. ಪರಮೇಶ್ವರನ ಸಗುಣಮೂರ್ತಿಯನ್ನು ಧ್ಯಾನಮಾಡಿ ಅಷ್ಟೋತ್ತರಶತನಾಮರೂಪವಾದ ಈ ಸ್ತೋತ್ರವನ್ನು ಹೇಳಿಕೊಳ್ಳಬೇಕೆಂಬುದು ಒಟ್ಟರ್ಥವು

# ಸ್ತೋತ್ರ

ಶಿವೋ ಮಹೇಶ್ವರಃ ಶಮ್ಭುಃ ಪಿನಾಕೀ ಶಶಿಶೇಖರಃ ।
ವಾಮದೇವೋ ವಿರೂಪಾಕ್ಷಃ ಕಪರ್ದೀ ನೀಲಲೋಹಿತಃ ॥ ೩ ॥

## ವಿವರಣೆ

ಈ ನೂರೆಂಟು ನಾಮಗಳಲ್ಲಿ ಮೊದಲನೆಯದಾದ ಶಿವನಾಮಕ್ಕೆ ಅನೇಕ ಅರ್ಥಗಳುಂಟು. ಹೇಗೆಂದರೆ :

(೧) ಸರ್ವಜ್ಞತ್ವ, ತೃಪ್ತಿ, ಅನಾದಿಜ್ಞಾನ, ಸ್ವಾತಂತ್ರ್ಯ, ಅಲುಪ್ತ ಶಕ್ತಿ, ಅನಂತಶಕ್ತಿ– ಇವು ಆರಕ್ಕೂ ಷಡಂಗಗಳೆಂದು ಹೆಸರು ; ಜ್ಞಾನ, ವೈರಾಗ್ಯ, ಐಶ್ವರ್ಯ, ತಪಸ್ಸು, ಸತ್ಯ, ಕ್ಷಮೆ, ಧೃತಿ, ಸ್ರಷ್ಟೃತ್ವ, ಆತ್ಮಜ್ಞಾನ, ಅಧಿಷ್ಠಾತೃತ್ವ– ಇವು ಹತ್ತಕ್ಕೆ ಅವ್ಯಯಗಳೆಂದು ಹೆಸರು. ಈ ಹದಿನಾರು ಶಿವಗುಣಗಳಿರುವದರಿಂದ ಈತನಿಗೆ ಶಿವನೆಂದು ಹೆಸರು. ಶಿವನು ಸ್ವತಃ ನಿರ್ಗುಣ ನಾದರೂ ಲೋಕಾನುಗ್ರಹಕ್ಕಾಗಿ ಸಗುಣನೂ ಸಾಕಾರನೂ ಆಗುತ್ತಾನೆ.

(೨) ಆಣವ, ಕಾರ್ಮಣ, ಮಾಯೀಯ– ಎಂಬ ಮೂರು ಬಗೆಯ ಮಲವೂ ಇಲ್ಲದೆ ಶುದ್ಧನಾಗಿರುವದರಿಂದ ಶಿವನೆಂಬ ಹೆಸರು ಬಂದಿದೆ– ಎಂದೂ ಹೇಳಬಹುದು. ಅಣು ಎಂದರೆ ಜೀವನು ; ಅವನಿಗೆ ಜೀವತ್ವವನ್ನುಂಟು ಮಾಡಿರುವ ಅನಾದಿಯಾದ ಅವಿದ್ಯೆಯೇ ಅಣವಮಲವೆನಿಸುತ್ತದೆ. ಅನಾದಿ ಯಾದ ಕರ್ಮಫಲವಾಸನೆಯೇ ಕಾರ್ಮಣಮಲವು. ಇದಾನೆ, ಬೆಳಗು ತ್ತಾನೆ–ಎಂಬ ವ್ಯವಹಾರಕ್ಕೆ ತಕ್ಕವನಾದರೂ ಇಲ್ಲ, ತೋರುವದಿಲ್ಲ– ಎಂಬ ರೀತಿಯಿಂದ ವ್ಯವಹಾರವಾಗುವಂತೆ ಮಾಡಿರುವ ಆವರಣವೇ ಮಾಯೀಯ ಮಲ. ಈ ಮಲತ್ರಯವು ಇಲ್ಲದ್ದರಿಂದ ಪರಿಶುದ್ಧನಾಗಿರುವ ಪರಮೇಶ್ವರ ನಿಗೆ ಶಿವನೆಂದು ಹೆಸರು– ಹೀಗೆಂದು ಶಿವಾಗಮಜ್ಞರು ಹೇಳುತ್ತಾರೆ.

(೩) ಈತನನ್ನೇ ಜಗತ್ತೆಲ್ಲವೂ ಆಧಾರವಾಗಿ ಮಾಡಿಕೊಂಡಿರುವದ ರಿಂದ (ಶೇತೇ ಅಸ್ಮಿನ್ ಇತಿ ಶಿವಃ) ಈತನಿಗೆ ಶಿವನೆಂದು ಹೆಸರು.

(೪) ಅಥವಾ ಲೋಕಹಿತವನ್ನು ಬಯಸುತ್ತಾನಾದ್ದರಿಂದ ಶಿವನು (ವಷ್ಟೀತಿ ಶಿವಃ) 'ಹಿಸಿಧಾತೋಃ ಸಿಂಹಶಬ್ದೋ ವಶಕಾನ್ತಾ ಶಿವಃ ಸ್ಮೃತಃ | ವರ್ಣವ್ಯತ್ಯಯತಃ ಸಿದ್ಧಃ ಪಶ್ಯಕಃ ಕಶ್ಯಪೋ ಯಥಾ' || (ಹಿಂಸೆಮಾಡುವದರಿಂದ, ಹಿಸ್–ಹಿಂಸೆಮಾಡು ಎಂಬ ಧಾತುವಿನಿಂದ ಸಿಂಹವೆಂಬ ಶಬ್ದವು ಆಗಿರುತ್ತದೆ. ವಶ್–ಬಯಸು ಎಂಬ ಧಾತುವಿನಿಂದ ಶಿವನೆಂದು ಆಗಿರುತ್ತದೆ. ಪಶ್ಯಕ–ನೋಡುವಾತನು ಎಂಬ ಮಾತು ಕಶ್ಯಪ ಎಂದಾಗಿರುವಂತೆ ಈ ಶಬ್ದವು ವರ್ಣಗಳ ವ್ಯತ್ಯಾಸದಿಂದ ಆಗಿರುತ್ತದೆ) ಎಂಬ ವಚನವೊಂದುಂಟು.

(೮) ಶಿವವನ್ನು ಎಂದರೆ ಮಂಗಲವನ್ನು ಉಂಟುಮಾಡುತ್ತಾನಾದ್ದರಿಂದ ಶಿವನು ಎಂದಾದರೂ ಹೇಳಬಹುದು.

ನಾನಾರೀತಿಯಿಂದ 'ಶಿವ' ಎಂಬ ಹೆಸರು ಪರಮೇಶ್ವರನ ಗುಣಗಳನ್ನು ಹೇಳುತ್ತದೆ. ಇದು ಪಂಚಾಕ್ಷರಿಯಲ್ಲಿ ಪ್ರಸಿದ್ಧವಾಗಿರುವ ನಾಮವು. ಶ್ರುತಿಸ್ಮೃತಿಗಳಲ್ಲಿ ಪಂಚಾಕ್ಷರಿಯೂ ಶಿವನಾಮವೂ ಸುಪ್ರಸಿದ್ಧವಾಗಿರುತ್ತವೆ. ಈ ನಾಮವನ್ನು ಶಿವಾಗಮವನ್ನು ಬಲ್ಲವರು ಜೀವರತ್ನವೆಂದು ಕರೆಯುತ್ತಾರೆ. ಆದ್ದರಿಂದ ಈ ಅಷ್ಟೋತ್ತರವು ಸಕಲಶ್ರೇಯಸ್ಸಿಗೂ ಕಾರಣವಾಗಿರುವ ಸಾಂಬಶಿವನ ಹೆಸರಾಗಿರುವ ಸರ್ವೋತ್ಕೃಷ್ಟವಾಗಿರುವ ಶಿನನಾಮದಿಂದ ಪ್ರಾರಂಭವಾಗಿದೆ– ಎಂದು ನೆನಪಿಡಬೇಕು.

ಈಗ ಮಹೇಶ್ವರನೆಂಬ ಎರಡನೆಯ ನಾಮದ ಅರ್ಥವನ್ನು ವಿಚಾರಮಾಡೋಣ : ಶಿವನೆಂಬುದು ಕಾರಣರೂಪನಾದ ಪರಮೇಶ್ವರನ ನಾಮವೆಂದೂ ಮಹೇಶ್ವರನೆಂಬುದು ಕಾರ್ಯರೂಪನಾದ ಪರಮೇಶ್ವರನ ನಾಮವೆಂದೂ ಈ ಮೊದಲೇ ತಿಳಿಸಿದ್ದಾಗಿರುತ್ತದೆ. ಈಶ್ವರನೆಂದರೆ ಆಳುವವನು. ಇಂದ್ರಾದಿಗಳೂ ಕೂಡ ಸ್ವರ್ಗಾದಿಗಳನ್ನು ಆಳುತ್ತಾರಾದರೂ ಅವರಿಗೆ ನಿರಂಕುಶವಾದ ಈಶಿತೃತ್ವ ವಿರುವದಿಲ್ಲ. ಆದರೆ ಶಿವನು ಈಶ್ವರರಾದ ಇಂದ್ರಾದಿಗಳಿಗೂ ಈಶ್ವರನು, ಎಲ್ಲರನ್ನೂ ಆಳುವವನು ; ಆದ್ದರಿಂದ ಅವನಿಗೆ ಮಹೇಶ್ವರನೆಂದು ಹೆಸರು.

ಆಗಮವನ್ನು ಬಲ್ಲವರು ಇನ್ನೊಂದು ರೀತಿಯಿಂದ 'ಮಹೇಶ್ವರ' ಎಂಬ ಹೆಸರನ್ನು ವಿವರಿಸುತ್ತಾರೆ : ತ್ರಿಮೂರ್ತಿಗಳನ್ನು ಉಂಟುಮಾಡುವ ಬ್ರಹ್ಮ

ಮೂರ್ತಿಗೆ ಪರಮಶಿವನೆಂಬ ಹೆಸರುಂಟು. ಆತನು ಪರಮಶಿವ, ಸದಾಶಿವ, ಮಹೇಶ್ವರ–ಎಂದು ಮೂರು ಬಗೆ. ಅವರಲ್ಲಿ ಪರಮಶಿವನು ಒಬ್ಬನೇ. ಸದಾಶಿವನು ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಮೂರ್ತಸಾದಾಖ್ಯ, ಕರ್ತೃಸಾದಾಖ್ಯ, ಕರ್ಮಸಾದಾಖ್ಯ–ಎಂದು ಐದು ಬಗೆ; ಮಹೇಶ್ವರನು ಚಂದ್ರಶೇಖರನೇ ಮುಂತಾಗಿ ಇಪ್ಪತ್ತೈದು ಬಗೆ. ಈ ರೀತಿಯಲ್ಲಿ ಪರಮಶಿವತತ್ತ್ವವು ಮೂರು ವ್ಯೂಹಗಳಾಗಿ ಮೂವತ್ತೊಂದು ಬಗೆಯಾಗಿರುತ್ತವೆ. ಈ ಮೂವರಲ್ಲಿ ಮಹೇಶ್ವರನೇ ನೇರಾಗಿ ತ್ರಿಮೂರ್ತಿಗಳನ್ನುಂಟುಮಾಡುವಾತನೆಂದು ಶಿವಪುರಾಣಗಳಲ್ಲಿ ವರ್ಣಿತವಾಗಿರುತ್ತದೆ. ಶಿವನಿಗೆ ಸೃಷ್ಟಿ, ಸ್ಥಿತಿ, ಉಪಸಂಹಾರ ತಿರೋಧಾನ, ಅನುಗ್ರಹ–ಎಂಬ ಐದು ಕೃತ್ಯಗಳಿರುತ್ತವೆಯೆಂದು ತಂತ್ರಗಳಲ್ಲಿಯೂ ಪುರಾಣಗಳಲ್ಲಿಯೂ ಪ್ರಸಿದ್ಧವಾಗಿರುತ್ತದೆ. ಆದ್ದರಿಂದ ತ್ರಿಮೂರ್ತಿಗಳನ್ನು ತನ್ನಲ್ಲಿ ತಿರೋಧಾನಮಾಡಿಕೊಳ್ಳುವದರಿಂದ ಮಹೇಶ್ವರನೆಂದು ಹೆಸರು–ಎಂಬುದು ಈ ಶಬ್ದದ ಒಂದು ನಿರ್ವಚನವಾಗಿರುತ್ತದೆ.

ಈಗ ಶಂಭು ಎಂಬ ನಾಮದ ವಿಚಾರವನ್ನು ಮಾಡಬೇಕಷ್ಟೆ. ಶಂ ಎಂದರೆ ಸುಖವನ್ನು ಭಾವಯತಿ– ಉಂಟುಮಾಡುವಾತನು; ಶಂ– ಎಂದರೆ ಸುಖವನ್ನು ಭವತಿ– ಪಡೆಯುವಾತನು; ಶಂ– ಸುಖರೂಪವಾಗಿ ಭವತಿ– ಇರುವಾತನು, ಎಂದರೆ ಸದಾನಂದರೂಪನು. ಆದ್ದರಿಂದ ತಾನು ಸುಖರೂಪನು ಸುಖವುಳ್ಳಾತನು, ಮಿಕ್ಕವರಿಗೂ ಸುಖವನ್ನುಂಟುಮಾಡುವಾತನು–ಎಂದು ಈ ನಾಮದ ಅರ್ಥವು. ಶಂಭು ಎಂಬುದು ಸಂಹಾರಕರುದ್ರಮೂರ್ತಿಯ ಹೆಸರೆಂದು ಆಗಮವಿದರು ಹೇಳುತ್ತಾರೆ. ನಾನಾಯೋನಿಗಳಲ್ಲಿ ತೊಳಲುತ್ತಿರುವ ಜೀವರ ದುಃಖವನ್ನು ಪರಿಹರಿಸುವದಕ್ಕಾಗಿ ರುದ್ರನು ಅದನ್ನು ಉಪಸಂಹಾರಮಾಡಿ ಪ್ರಲಯದಲ್ಲಿ ಸ್ವಲ್ಪಕಾಲದವರೆಗೆ ಅವರಿಗೆ ವಿಶ್ರಾಂತಿಯನ್ನು ಕೊಡುತ್ತಾನೆ. ಚಿಕಿತ್ಸಕನು ಹುಣ್ಣು ಮುಂತಾದವುಗಳನ್ನು ಕತ್ತರಿಸಿ ರೋಗಿಗಳಿಗೆ ಸುಖವನ್ನುಂಟುಮಾಡುವಂತೆ ರುದ್ರನು ಸಂಹಾರಕೃತ್ಯದಿಂದ ಸುಖವನ್ನುಂಟುಮಾಡುವದರಿಂದ ಸಂಹಾರಲೀಲೆಯೂ ಒಂದು ದಯಾಕೃತ್ಯವೆಂದು ಶಿವಪುರಾಣದಲ್ಲಿ ವರ್ಣಿತವಾಗಿರುತ್ತದೆ.

ಇನ್ನು ನಾಲ್ಕನೆಯದಾದ ಪಿನಾಕಿ ಎಂಬ ನಾಮ. ಪೂರ್ವದಲ್ಲಿ ಕಣ್ವನೆಂಬ ಋಷಿಯು ತಪಸ್ಸನ್ನು ಮಾಡುತ್ತಿರಲು ಆತನ ತಲೆಯಮೇಲುಗಡೆಯಲ್ಲಿ

ಒಂದು ಹುತ್ತವು ಬೆಳೆದುಕೊಂಡಿತು. ಅದರೊಳಗಿನಿಂದ ಒಂದು ಬಿದಿರುಮೆಳೆಯು ಬೆಳೆದುಕೊಂಡಿತು. ಆ ಬಿದಿರಿನಿಂದ ಶಿವ, ವಿಷ್ಣು, ಸೋಮ– ಇವರುಗಳಿಗಾಗಿ ಪಿನಾಕ, ಶಾರ್ಙ್ಗ, ಗಾಂಡೀವ– ಎಂಬ ಮೂರು ಬಿಲ್ಲುಗಳನ್ನು ಬ್ರಹ್ಮನು ಏರ್ಪಡಿಸಿದನು ಎಂದು ಪುರಾಣಪ್ರಸಿದ್ಧಿ. ಈ ಪಿನಾಕವೆಂಬ ಧನುಸ್ಸನ್ನು ತ್ರಿಪುರಸಂಹಾರದಲ್ಲಿ ಪರಮೇಶ್ವರನು ಉಪಯೋಗಿಸಿದನೆಂದು ಭಾರತದಲ್ಲಿರುತ್ತದೆ. ಲೋಕಾನುಗ್ರಹಕ್ಕಾಗಿ ಪಿನಾಕವನ್ನು ಧರಿಸಿದವನು ಎಂಬರ್ಥದಲ್ಲಿ ಇದು ಶಿವನ ಸ್ತೋತ್ರವಾಗಿರುತ್ತದೆ.

ಈಗ **ಶಶಿಶೇಖರನೆಂಬ** ಐದನೆಯ ನಾಮವು. ಚಂದ್ರನು ಜ್ಞಾನರೂಪನೆಂದು ಆಗಮದಲ್ಲಿರುತ್ತದೆಯಾದ್ದರಿಂದ ಜಗತ್ತನ್ನು ಸೃಷ್ಟಿಸುವ ಮೊದಲೇ ಅದರ ತಿರುಳನ್ನೆಲ್ಲ ಅಪರೋಕ್ಷಜ್ಞಾನದಿಂದ ಅರಿತಿರುವವನೆಂಬುದನ್ನು ಈ ನಾಮವು ಸೂಚಿಸುತ್ತದೆ. ದಕ್ಷಯಜ್ಞದಲ್ಲಿ ಕ್ರೋಧವಶನಾದ ವೀರಭದ್ರನು ಅಪರಾಧಿಗಳನ್ನು ದಂಡಿಸುವ ಭರದಲ್ಲಿ ಚಂದ್ರನನ್ನೂ ಶಿಕ್ಷಿಸಿದನು. ಆದರೆ ಚಂದ್ರನು ತಾನು ನಿರಪರಾಧಿಯೆಂದು ಹೇಳಿಕೊಂಡದ್ದರಿಂದ ದಂಡಿಸಬಾರದವರನ್ನು ದಂಡಿಸಿದ ದೋಷದ ಶಾಂತಿಗಾಗಿ ಅವನನ್ನು ಶಿವನು ತನ್ನ ತಲೆಯ ಮೇಲೆ ಧರಿಸಿದನು–ಎಂದು ಅನುಶಾಸನಿಕಪರ್ವದಲ್ಲಿ ಬರೆದಿರುತ್ತದೆ. ಆದ್ದರಿಂದ ಪರಮೇಶ್ವರನು ಮೃದುಹೃದಯನೆಂಬುದನ್ನೂ ಈ ನಾಮವು ಸೂಚಿಸುತ್ತದೆ. ಈ ಚಂದ್ರಶೇಖರಮೂರ್ತಿಯು ಕರ್ಮಸಾದಾಖ್ಯದಿಂದ ಹುಟ್ಟಿರುವ ಮಹೇಶ್ವರನ ಪ್ರಥಮಮೂರ್ತಿಯು ಎಂದು ಆಗಮದಲ್ಲಿ ಹೇಳಿರುತ್ತದೆ.

ವಾಮದೇವನೆಂಬುದು ಆರನೆಯ ನಾಮವು. ವಾಮನಾದ, ಸುಂದರನಾದ, ದೇವನು ಎಂದು ಆ ಶಬ್ದಕ್ಕೆ ಅರ್ಥ. ಕಲ್ಪತರುವಿನ ಬುಡದಲ್ಲಿ ಉಮಾಸಹಿತನಾಗಿ ಕುಳಿತಿರುವ ಪರಮೇಶ್ವರನ ಸುಂದರವಾದ ಮೂರ್ತಿಯನ್ನು ಧ್ಯಾನಕ್ಕಾಗಿ ಆಗಮದಲ್ಲಿ ಉಪಯೋಗಿಸಿರುತ್ತದೆ. ಅಥವಾ ವಾಮನೆಂದರೆ ವಕ್ರನಾದವನು, ಎಂದರೆ ಲೋಕವಿಲಕ್ಷಣವಾದ ಕಪಾಲಧಾರಣೆಯೇ ಮುಂತಾದ ಆಚಾರವುಳ್ಳವನು ಎಂದರ್ಥ. ಈ ಪಕ್ಷದಲ್ಲಿ ಲೋಕವಿಲಕ್ಷಣವಾದ ಆಚಾರವುಳ್ಳ ದೇವನು, ಅಥವಾ ಲೋಕವಿಲಕ್ಷಣವಾಗಿ ಕ್ರೀಡೆಯನ್ನು ಮಾಡುತ್ತಿರುವಾತನು– ಎಂದು ಒಟ್ಟರ್ಥವಾಗುತ್ತದೆ. ಅಥವಾ ಎಡಗಡೆಯಲ್ಲಿ ಚಿಚ್ಛಕ್ತಿ

ರೂಪಗಳಾಗಿರುವ ದೇವಿಯಿಂದ ಕೂಡಿ ಕ್ರೀಡಿಸುತ್ತಿರುವವನು ಎಂದೂ ಅರ್ಥ ಮಾಡಬಹುದು. ಸುಂದರವಾದ ದೇವನು ಎಂಬಲ್ಲಿ ಎಲ್ಲರಿಗೂ ಅತ್ಯಂತಪ್ರಿಯ ನಾದ ಆತ್ಮನಾಗಿರುವವನು ಎಂಬ ವೇದಾಂತಾರ್ಥವು ಸೂಚಿತವಾಗಿರುತ್ತದೆ. ಲೋಕವಿಲಕ್ಷಣಾಚಾರವುಳ್ಳವನು ಎಂಬಲ್ಲಿ ಪರಶಿವನಿಗೆ ಇಷ್ಟಪ್ರಾಪ್ತಿಯಾಗಲಿ ಅನಿಷ್ಟನಿವೃತ್ತಿಯಾಗಲಿ ಆಗಬೇಕಾಗಿಲ್ಲವೆಂಬರ್ಥವು ಸೂಚಿತವಾಗಿರುತ್ತದೆ. ಮೂರನೆಯ ಅರ್ಥದಿಂದ ಸೃಷ್ಟ್ಯಾದಿಲೀಲೆಗಳಲ್ಲಿಯೂ ಸಂಪೂರ್ಣವಾಗಿ ಪರ ಮೇಶ್ವರನ ವ್ಯಾಪಾರವಿಲ್ಲ, ಶಕ್ತಿಯ ಮೂಲಕವೇ ಸೃಷ್ಟ್ಯಾದಿಕರ್ತನೆನಿಸಿ ಕೊಳ್ಳುವನೆಂತಲೂ ಸೂಚಿತವಾಗುತ್ತದೆ. ಈ ವಾಮದೇವನೆಂಬುದು ಸದಾಶಿವ ವ್ಯೂಹಕ್ಕೆ ಸೇರಿದ ಉತ್ತರಮುಖಾಭಿಮಾನಿಯಾದ ಮೂರ್ತಿಯ ಹೆಸರು ಎಂದು ಆಗಮಿಕರು ಹೇಳುತ್ತಾರೆ.

ವಿರೂಪಾಕ್ಷನೆಂಬುದು ಏಳನೆಯ ನಾಮವು. ಲೋಕವಿರುದ್ಧವಾಗಿ ಮೂರು ಕಣ್ಣುಗಳುಳ್ಳವನು ಎಂದು ಇದರ ಅರ್ಥವು. ಅಥವಾ ಪರಮೇಶ್ವರನ ಇಂದ್ರಿಯಗಳೂ ಶರೀರದ ಧಾತುಗಳೂ ಲೋಕವಿಲಕ್ಷಣವಾಗಿರುತ್ತವೆ, ಎಂದರೆ ಅವು ಭೌತಿಕವಾಗಿರುವದಿಲ್ಲ; ಆದ್ದರಿಂದ ಇವನು ವಿರೂಪಾಕ್ಷನು. ಆದ್ದರಿಂದ ಲೇ "ಭುವನಾಧ್ವವೇ ಈತನ ರೋಮವು, ವರ್ಣಾಧ್ವವೇ ಈತನ ಚರ್ಮವು, ಮಂತ್ರಾಧ್ವವೇ ಈತನ ರಕ್ತವು, ಪದಾಧ್ವವೇ ನರಗಳು, ಮಾಂಸಗಳು, ಪೃಥಿವ್ಯಾದಿತತ್ತ್ವಾಧ್ವವೇ ಈತನ ಶುಕ್ಲಮಜ್ಜಾದಿಗಳು" ಎಂದು ಪರಮೇಶ್ವರನ ಆಕಾರವೆಲ್ಲವೂ ಮಂತ್ರಾತ್ಮಕವಾಗಿರುವದೆಂದೂ ಆಗಮಗಳಲ್ಲಿ ವರ್ಣಿತವಾಗಿರು ತ್ತದೆ. ಮೊದಲನೆಯ ಅರ್ಥದಲ್ಲಿ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ- ಎಂಬ ಮೂರು ಶಕ್ತಿಗಳಿಂದ ಕೂಡಿದಾತನೆಂಬ ಅರ್ಥವೂ ಎರಡನೆಯ ಅರ್ಥದಲ್ಲಿ ಈತನ ಶರೀರವು ಅಪ್ರಾಕೃತವಾದದ್ದೆಂಬ ಅರ್ಥವೂ ಸೂಚಿತವಾಗಿರುತ್ತದೆ.

ಕಪರ್ದೀ ಎಂಬುದು ಎಂಟನೆಯ ನಾಮವು. ಕಪರ್ ಎಂದರೆ ಜಲ ಪ್ರವಾಹವು; ದ ಎಂದರೆ ಶುದ್ಧಮಾಡುವಾತನು. ಗಂಗಾಪ್ರವಾಹದಿಂದ ನಿರ್ಮಲನಾಗಿ ಕಾಣುತ್ತಿರುವಾತನು ಅಥವಾ ಗಂಗಾಪ್ರವಾಹವನ್ನು ಪವಿತ್ರ ಮಾಡುವವನು ಎಂದು ನಾಮದ ಅರ್ಥವಾಗುತ್ತದೆ. ಅಥವಾ ಕಪರ್-ಗಂಗಾ ಪ್ರವಾಹವನ್ನು; ದ-ಭಗೀರಥನಿಗೆ ಕೊಡುವ ಜಟೆಯು ಎಂದಾದರೂ ಅರ್ಥ ಮಾಡಬಹುದು. ಕಪರ್ದವುಳ್ಳಾತನಾದ್ದರಿಂದ ಜಟಾಜೂಟಧರನಾದ ಶಿವನಿಗೆ

'ಕಪರ್ದಿ' ಎಂಬ ಹೆಸರುಂಟಾಗಿರುತ್ತದೆ. ಗಂಗೆಯನ್ನು ಜಟಾಜೂಟದಲ್ಲಿ ಕಟ್ಟಿಟ್ಟ ಮಹಾಮಹಿಮನು ಅವನು, ಗಂಗೆಯ ಪಾವಿತ್ರ್ಯಕ್ಕೂ ಕಾರಣನಾದ ಈ ಶಿವನನ್ನು ಸ್ಮರಿಸಿದವರು ಅತ್ಯಂತಪವಿತ್ರರು- ಎಂಬೆರಡು ಅಭಿಪ್ರಾಯಗಳೂ ಈ ನಾಮದಲ್ಲಿ ಅಡಕವಾಗಿರುತ್ತವೆ.

ನೀಲಲೋಹಿತನೆಂಬುದು ಒಂಬತ್ತನೆಯ ನಾಮವು. ಪೂರ್ವದಲ್ಲಿ ಬ್ರಹ್ಮನು ಶಿವನೇ ತನಗೆ ಪುತ್ರನಾಗಿ ಹುಟ್ಟಲಿ ಎಂಬ ಬಯಕೆಯಿಂದ ತಪಸ್ಸು ಮಾಡಿ ಅಗ್ನಿಯಲ್ಲಿ ಹೋಮಮಾಡುತ್ತಿರುವಲ್ಲಿ ಅವನ ಹಣೆಯಿಂದ ಹುಟ್ಟಿದ ಬೆವರುಹನಿಯು ಅಗ್ನಿಯಲ್ಲಿ ಬಿದ್ದು ಮೊದಲು ಕೆಂಪಾಗಿ ಕೂಡಲೇ ನೀಲವರ್ಣ ವಾಗಿ ಮೇಲಕ್ಕೆದ್ದಿತು. ಆದರಿಂದ ಭಗವಂತನಾದ ಶಿವನು ಮೈದೋರಿಕೊಂಡ ನು- ಎಂದು ಶಿವಪುರಾಣದಲ್ಲಿ ಕಥೆಯಿದೆ. ಮೊದಲು ಲೋಹಿತನಾಗಿದ್ದು ಆಮೇಲೆ ನೀಲವರ್ಣನಾದ್ದರಿಂದ ನೀಲಲೋಹಿತನೆಂದೇ ಹೆಸರಾಯಿತು. ಅಥವಾ ಸೂರ್ಯಮಂಡಲದಲ್ಲಿರುವ ಈ ದೇವನಿಗೆ ಕಂಠದವರೆಗೆ ನೀಲವರ್ಣವೂ ಮಿಕ್ಕ ಶರೀರವೆಲ್ಲವೂ ಲೋಹಿತವರ್ಣವೂ ಇರುತ್ತದೆ-ಎಂದು ಶ್ರುತಿಯಲ್ಲಿ ಪ್ರಸಿದ್ಧವಾಗಿರುತ್ತದೆ. ಆದ್ದರಿಂದ ಈತನಿಗೆ ನೀಲಲೋಹಿತನೆಂದು ಹೆಸರು. ಅಥವಾ ಎಡಗಡೆಯ ಅರ್ಧದಲ್ಲಿ ನೀಲವರ್ಣನಾಗಿ ದೇವೀರೂಪದಿಂದಲೂ ಬಲ ಗಡೆಯ ಅರ್ಧದಲ್ಲಿ ಲೋಹಿತವರ್ಣನಾಗಿ ಶಿವರೂಪದಿಂದಲೂ ಕಾಣಿಸುತ್ತಿರು ವದರಿಂದ ಈತನಿಗೆ ನೀಲಲೋಹಿತನೆಂದು ಹೆಸರು. ಅಥವಾ ನೀಲವಾದ ಪ್ರಕೃತಿಯನ್ನು ಲೋಹಿತನಾದ ಪುರುಷನಾಗಿ ಪ್ರವರ್ತಿಸುತ್ತಾನಾದ್ದರಿಂದ ನೀಲ ಲೋಹಿತನೆಂದು ಈತನಿಗೆ ಹೆಸರು. ಇಲ್ಲಿ ಮೊದಲನೆಯ ಅರ್ಥದಲ್ಲಿ ತ್ರಿಮೂರ್ತಿ ಗಳು ಒಬ್ಬರಿಂದೊಬ್ಬರು ಉತ್ಪತ್ತಿಯಾಗುತ್ತಿರುವರೆಂಬ ಶಿವಪುರಾಣೋಕ್ತಿ ಯನ್ನು ಸೂಚಿಸಿದಂತಾಗುತ್ತದೆ. ಸೂರ್ಯಮಂಡಲದಲ್ಲಿರುವ ಪುರುಷನೆಂದೂ ಪ್ರಧಾನಪುರುಷರಿಬ್ಬರಿಗೂ ಅಧಿಷ್ಠಾತೃವೆಂದೂ ಹೇಳುವ ಅರ್ಥದಲ್ಲಿ ಹಿಂದೆ ಹೇಳಿದ ಸದಾಶಿವನನ್ನೇ ಹೇಳಿದಂತಾಗುತ್ತದೆ. ಮೂರನೆಯ ವ್ಯಾಖ್ಯಾನದಲ್ಲಿ ಮಹೇಶ್ವರವ್ಯೂಹದಲ್ಲಿ ಸೇರಿಕೊಂಡಿರುವ ಅರ್ಧನಾರೀಶ್ವರನನ್ನೇ ಹೇಳಿ ದಂತಾಗುತ್ತದೆ.

ಶಙ್ಕರಃ ಶೂಲಪಾಣಿಶ್ಚ ಖಟ್ವಾಙ್ಗೀ ವಿಷ್ಣುವಲ್ಲಭಃ ।
ಶಿಪಿವಿಷ್ಟೋಽಮ್ಬಿಕಾನಾಥಃ ಶ್ರೀಕಣ್ಠೋ ಭಕ್ತವತ್ಸಲಃ ॥ ೨ ॥

## ವಿವರ:

ಶಂಕರನೆಂದರೆ ಸುಖವನ್ನುಂಟುಮಾಡುವವನು ಎಂದರ್ಥ. "ಶಂಭು" ಎಂಬ ಹೆಸರಿನ ವಿವರಣೆಯನ್ನು ನೋಡಿರಿ.

ಶೂಲಪಾಣಿ ಎಂಬುದು ಹನ್ನೊಂದನೆಯ ನಾಮವು. ಶೂಲವು ತ್ರಿಗುಣಾತ್ಮಕವಾಗಿರುವದೆಂಬುದನ್ನು ಪದ್ಮಪುರಾಣದಲ್ಲಿ ಹೇಳಿರುತ್ತದೆ. ತ್ರಿಗುಣಾತ್ಮಕವಾದ ಮಾಯೆಯನ್ನು ತನ್ನ ಕೈಯಲ್ಲಿಟ್ಟುಕೊಂಡಿರುವಾತನು, ಸರ್ವಥಾ ಸ್ವತಂತ್ರನಾದವನು ಎಂಬರ್ಥವನ್ನು ಸೂಚಿಸಿದಂತಾಯಿತು.

ಖಟ್ವಾಙ್ಗೀ ಎಂಬುದು ಹನ್ನೆರಡನೆಯ ನಾಮವು. ಖಟ್ವಾಂಗವೆಂದರೆ ಮಂಚದ ಕಾಲು; ಅದನ್ನೇ ಆಯುಧವಾಗಿ ಉಳ್ಳಾತನು ಖಟ್ವಾಂಗಿಯು. ಸತ್ತ್ವಪ್ರವರ್ತಕವಾದ ಇಚ್ಛಾದಿಶಕ್ತಿಗಳನ್ನೇ ಖಟ್ವಾಂಗವೆಂದು ಕರೆಯುವರೆಂದು ಆಗಮವಚನವಿದೆ. ಅಥವಾ ಬ್ರಹ್ಮನ ಶಿರಸ್ಸನ್ನು ಕತ್ತರಿಸಿಹಾಕಿದ್ದಕ್ಕಾಗಿ ಪ್ರಾಯಶ್ಚಿತ್ತವಾಗಿ ಮಂಚದಕಾಲನ್ನು ಶಿವನು ಧರಿಸಿದನೆಂದು ಪುರಾಣದಲ್ಲಿದೆ. ಬ್ರಹ್ಮನ ಪ್ರಾಣವನ್ನು ಕಳೆಯದಿದ್ದರೂ, ತಾನು ಸ್ವತಃ ತ್ರಿಗುಣಾತೀತನಾಗಿರುವದರಿಂದ ಯಾವ ವಿಧಿನಿಷೇಧಗಳಿಗೂ ಗೋಚರನಲ್ಲದಿದ್ದರೂ, ಬ್ರಹ್ಮಹತ್ಯೆಯು ದೊಡ್ಡ ಪಾಪವೆಂಬುದನ್ನು ಜನರಿಗೆ ತಿಳಿಯಪಡಿಸುವದಕ್ಕಾಗಿ ಶಿವನು ತಾನೇ ಪ್ರಾಯಶ್ಚಿತ್ತರೂಪವಾಗಿ ಖಟ್ವಾಂಗವನ್ನು ಧರಿಸಿದನು–ಎಂಬುದರಿಂದ ಆಚಾರಪಾಲನೆಯಲ್ಲಿ ಪರಮೇಶ್ವರನಿಗಿರುವ ಆದರವನ್ನು ಈ ನಾಮವು ಸೂಚಿಸುತ್ತದೆ.

ವಿಷ್ಣುವಲ್ಲಭನೆಂಬುದು ಹದಿಮೂರನೆಯ ನಾಮವು. ತಪಸ್ಸಿನಿಂದ ತನ್ನನ್ನು ಸಂತೋಷಗೊಳಿಸಿದ ವಿಷ್ಣುವಿಗೆ ಪರಮೇಶ್ವರನು ಚಕ್ರವನ್ನು ಕೊಟ್ಟನೆಂದು ಪುರಾಣಪ್ರಸಿದ್ಧಿಯು. ಸತ್ಯ, ಶುಚಿತ್ವ, ತ್ಯಾಗ, ತಪಸ್ಸು, ನಿಯಮ, ಕ್ಷಮೆ, ಧೃತಿ, ಭಕ್ತಿ– ಇವುಗಳಿಂದ ಕೂಡಿ ತ್ರಿಕರಣಶುದ್ಧಿಯಿಂದ ನನ್ನನ್ನು ಆರಾಧಿಸಿರುವ ಕೃಷ್ಣನಿಗಿಂತ ನನಗೆ ಹೆಚ್ಚು ಪ್ರಿಯರಾದವರು ಯಾರೊಬ್ಬರೂ ಇಲ್ಲ–ಎಂದು ಸೌಪ್ತಿಕಪರ್ವದಲ್ಲಿ ಶಿವನು ಅಶ್ವತ್ಥಾಮನಿಗೆ ಹೇಳಿರುತ್ತಾನೆ. ಅಥವಾ ವಿಷ್ಣುವೂ ಶಿವನ ಆತ್ಮನೇ ಆಗಿರುವದರಿಂದ ಶಿವನಿಗೆ ವಿಷ್ಣುವು ಅತ್ಯಂತ ಪ್ರಿಯನೆಂದು ಶ್ರುತಿಸ್ಮೃತಿಗಳಲ್ಲಿರುತ್ತದೆ. ಮೊದಲನೆಯ ವ್ಯಾಖ್ಯಾನದಲ್ಲಿ ಮಹೇಶ್ವರನ ಹತ್ತೊಂಬತ್ತನೆಯ ಮೂರ್ತಿಯನ್ನೂ ಎರಡ

ನೆಯ ವ್ಯಾಖ್ಯಾನವಲ್ಲಿ ಮಹೇಶ್ವರನ ಹದಿಮೂರನೆಯ ಮೂರ್ತಿಯಾದ ಶಂಕರನಾರಾಯಣಮೂರ್ತಿಯನ್ನೂ ವರ್ಣಿಸಿದಂತೆ ಆಯಿತೆಂದು ಆಗಮಜ್ಞರು ಹೇಳುತ್ತಾರೆ.

ಮುಂದಿನ ನಾಮ ಶಿಪಿವಿಷ್ಟನೆಂಬುದು. ಶಿಪಿಗಳೆಂದರೆ ಪಶುಸಂಜ್ಞಕ ರಾದ ಜೀವರು ; ಅವರಲ್ಲಿ ಪ್ರವೇಶಿಸಿ ಸ್ವಾಮಿಯಾಗಿರುವದರಿಂದ ಶಿವನಿಗೆ ಶಿಪಿವಿಷ್ಟನೆಂದು ಹೆಸರು.

**ಅಂಬಿಕಾನಾಥ.** ಅಂಬಿಕೆ ಎಂದರೆ ಗೌರಿಯು. ಆಕೆಯ ಪತಿಯು ಅಥವಾ ಆಕೆಯನ್ನು ಕೇಳಿಕೊಂಡವನು; ಅಥವಾ ಆಕೆಯನ್ನು ಬಯಸಿದವನು –ಎಂದು ಈ ನಾಮಕ್ಕೆ ಅರ್ಥವು. ಪಾರ್ವತಿಯನ್ನು ತನಗೆ ಮದುವೆಮಾಡಿ ಕೊಡಬೇಕೆಂದು ಶಿವನು ಸಪ್ತರ್ಷಿಗಳನ್ನು ಆಕೆಯ ತಂದೆಯ ಬಳಿಗೆ ಕಳುಹಿ ಸಿದ್ದೂ ಆಕೆಯನ್ನೇ ಮದುವೆಮಾಡಿಕೊಳ್ಳಬೇಕೆಂದು ತಪಸ್ಸುಮಾಡಿದ್ದೂ ಶಿವಪುರಾಣದಲ್ಲಿರುತ್ತದೆ. ಇದನ್ನು ಮಹೇಶ್ವರನ ಕಲ್ಯಾಣಸುಂದರಮೂರ್ತಿ ಯೆಂದು ಆಗಮದಲ್ಲಿ ತಿಳಿಸಿದೆ.

ಶ್ರೀಕಂಠನೆಂಬುದು ಹದಿನಾರನೆಯ ನಾಮವು. ಕಾಲಕೂಟವಿಷದಿಂದ ಉಂಟಾದ ಅಲಂಕಾರವುಳ್ಳ ಕಂಠವುಳ್ಳಾತನು ಎಂದರ್ಥ. ವಿಷವೂ ಕಂಠಕ್ಕೆ ಅಲಂಕಾರವೇ ಆಯಿತು, ಮತ್ತೊಬ್ಬರು ಯಾರೂ ಮಾಡಲಾಗದ ಅಸಾಧ್ಯ ಕರ್ಮವನ್ನೆಸಗಿದಾತನು ಎಂದೂ ಹೊಗಳಿದಂತಾಯಿತು. ಇದು ಆಗಮದಲ್ಲಿ ಹೇಳಿರುವ ಹದಿನೆಂಟನೆಯ ಮೂರ್ತಿಯು.

ಭಕ್ತವತ್ಸಲನೆಂಬುದು ಹದಿನೇಳನೆಯ ನಾಮವು. ಭಕ್ತರಲ್ಲಿ ಪ್ರೇಮ ವುಳ್ಳವನು ಎಂದು ಈ ನಾಮದ ಅರ್ಥವು. "ಭಕ್ತರಿಗೆ ನನ್ನನ್ನು ಪಡೆಯು ವದಕ್ಕಿಂತ ಹೆಚ್ಚಿನ ಲಾಭವಿಲ್ಲವೆಂಬುದು ಹೇಗೋ ಹಾಗೆಯೇ ನನಗೂ ಅವ ರನ್ನು ಪಡೆಯುವದಕ್ಕಿಂತ ಹೆಚ್ಚಿನ ಲಾಭವಿಲ್ಲ" ಎಂದು ಪರಮೇಶ್ವರನು ಪಾರ್ವತಿಗೆ ಶಿವಪುರಾಣದಲ್ಲಿ ಹೇಳಿರುತ್ತಾನೆ. ಇದು ಮಹೇಶ್ವರನ ಹದಿನೇಳ ನೆಯ ಮೂರ್ತಿಯು.

ಭವಃ ಶರ್ವಸ್ತ್ರಿಲೋಕೇಶಃ ಶಿತಿಕಣ್ಠಃ ಶಿವಾಪ್ರಿಯಃ ।
ಉಗ್ರಃ ಕಪಾಲೀ ಕಾಮಾರಿರನ್ಧಕಾಸುರಸೂದನಃ ॥೩॥

## ವಿವರಣೆ

ಭವನೆಂಬುದು ಹತ್ತೊಂಬತ್ತನೆಯ ನಾಮವು. ಸದ್ರೂಪನಾಗಿರುವವನು, ಜಗತ್ತಿಗೆ ಆಧಾರವಾಗಿರುವಾತನು, ಜಗತ್ಕಾರಣನಾಗಿರುವವನು– ಎಂದು ಈ ಶಬ್ದದ ಅರ್ಥವು. ಇದು ಜಲಾಭಿಮಾನಿಯಾದ ಶಿವನ ನಾಮವು. ಆದರೆ ಅಷ್ಟಮೂರ್ತಿಯುಳ್ಳ ಸಮಷ್ಟ್ಯಭಿಮಾನಿಯಾದ ಮೂರ್ತಿಗೂ ಭವನೆಂದು ಮೊದಲು ಹೇಳಿಕೊಂಡು ಶರ್ವಾದಿನಾಮಗಳನ್ನು ಹೇಳುವದು ಸ್ಮೃತಿಪುರಾಣಾಗಮಗಳಲ್ಲಿ ಕಂಡುಬರುತ್ತದೆ.

ಶರ್ವನೆಂದರೆ ಜಗತ್ತನ್ನೆಲ್ಲ ಪ್ರಲಯಕಾಲದಲ್ಲಿ ನಾಶಗೊಳಿಸುವಾತನು. ಇದು ಪೃಥಿವಿಯ ಅಧಿಷ್ಠಾತೃವಾದ ಮೂರ್ತಿಯ ಹೆಸರೆಂದೂ ನಿವೃತ್ತಿಕಲಾತ್ಮಕವಾದ ಪೃಥಿವಿಯ ಅಧಿಷ್ಠಾತೃವನ್ನೇ ಜಗದುಪಸಂಹಾರಕರ್ತೃವನ್ನಾಗಿ ಹೇಳಿರುತ್ತದೆಯೆಂದೂ ಆಗಮಿಕರು ಹೇಳುವರು.

ತ್ರಿಲೋಕೇಶನೆಂಬುದು ಇಪ್ಪತ್ತನೆಯ ಹೆಸರು. ಸೃಷ್ಟಿಸ್ಥಿತಿಸಂಹಾರಗಳನ್ನು ಮಾಡುತ್ತಾ ಮೂರು ಲೋಕಗಳನ್ನೂ ಆಳುವವನಾದ್ದರಿಂದ ತ್ರಿಲೋಕೇಶನೆಂದು ಶಿವನಿಗೆ ಹೆಸರು. ತ್ರಿಲೋಕೀಶ ಎಂಬ ಪಾಠವಿದ್ದರೆ ವ್ಯಾಕರಣಕ್ಕೆ ಹೆಚ್ಚು ಒಪ್ಪುವದೆಂದು ವ್ಯಾಖ್ಯಾನದಲ್ಲಿದೆ. ಆದರೆ "ತ್ರಿಲೋಕೇಶ" ಎಂದೇ ರೂಢಿಯಲ್ಲಿ ಹೇಳಿಕೊಳ್ಳುತ್ತಿದಾರೆ. ಆದ್ದರಿಂದ 'ತ್ರಿಲೋಕೇಷು ಈಶಃ ಈಶನಮಸ್ಯ' ( ಮೂರು ಲೋಕಗಳಲ್ಲಿ ಆಳ್ವಿಕೆಯುಳ್ಳಾತನು ) ಎಂಬ ರೀತಿಯಿಂದ ವಿಗ್ರಹವನ್ನು ಮಾಡಿಕೊಳ್ಳಬೇಕೆಂದು ವ್ಯಾಖ್ಯಾನಕಾರರು ಹೇಳಿರುವ ಸಮಾಧಾನವನ್ನೇ ಅನುಸರಿಸಿ ಇಲ್ಲಿ ತ್ರಿಲೋಕೇಶನೆಂಬ ನಾಮವನ್ನೇ ಇಟ್ಟುಕೊಂಡಿರುತ್ತದೆ.

ಶಿತಿಕಂಠನೆಂದರೆ ನೀಲಕಂಠನು. ಇದು ಹಾಲಾಹಲದಿಂದಾದ ನೀಲವರ್ಣವಲ್ಲ; ಏಕೆಂದರೆ ಅದನ್ನು ಶ್ರೀಕಂಠ ಎಂಬ ನಾಮದಿಂದ (ಹಿಂದೆ ಪು. ೧೨) ಹೇಳಿಯೇ ಆಗಿರುತ್ತದೆ. ಒಂದಾನೊಂದು ಕಲ್ಪದಲ್ಲಿ ಇಂದ್ರನು ವಜ್ರಾಯುಧದಿಂದ ಶಿವನನ್ನು ಹೊಡೆಯಲು ಕತ್ತಿನಲ್ಲಿ ನೀಲವರ್ಣವು ಏರ್ಪಟ್ಟಿತು ಎಂದು ಶಿವನ ಹೆಚ್ಚಿನ ಸಾಮರ್ಥ್ಯವನ್ನು ವರ್ಣಿಸಿ ಹರಿವಂಶದಲ್ಲಿ ಹೇಳಿರುತ್ತದೆ. ಆದ್ದರಿಂದಲೇ ಶ್ರುತಿಯಲ್ಲಿ ನೀಲಗ್ರೀವನೆಂದೂ ಶಿತಿಕಂಠನೆಂದೂ ಒಂದೇ ವಾಕ್ಯದಲ್ಲಿ ಎರಡು ನಾಮಗಳೂ ಕಾಣಬರುತ್ತವೆ.

ಶಿವಾಪ್ರಿಯನೆಂಬುದು ಚಿಚ್ಛಕ್ತಿರೂಪಳಾದ ದೇವಿಗೆ ಬೇಕಾದವನು ಎಂಬುದನ್ನು ತಿಳಿಸುತ್ತದೆ. ಶಿವ ಎಂಬ ನಾಮಕ್ಕೆ ಕೊಟ್ಟಿರುವ ಅರ್ಥಗಳೆಲ್ಲವೂ 'ಶಿವಾ' ಎಂಬ ನಾಮಕ್ಕೂ ಹೊಂದುತ್ತವೆ. ಶಿವಾ ಎಂಬ ಹೆಸರಿನ ಪರಶಕ್ತಿಯ ಸಂಬಂಧದಿಂದಲೇ ಶಿವನು ಶರೀರ, ಇಂದ್ರಿಯಗಳು, ಭುವನಗಳು, ಭೋಗ, ಕ್ಷೇತ್ರಜ್ಞ–ಮುಂತಾದ ರೂಪದಲ್ಲಿರುವ ಸಕಲಪ್ರಪಂಚವನ್ನೂ ಸೃಷ್ಟಿ ಮಾಡುತ್ತಾನೆ. ಶಿವನೂ ಶಕ್ತಿಯೂ ಶರೀರಶರೀರಿಗಳಂತೆ ನಿತ್ಯವಾಗಿ ಒಂದಾಗಿರುತ್ತಾರೆ; ಆದ್ದರಿಂದ ತನ್ನ ಆತ್ಮರೂಪಳೇ ಆಗಿರುವ ಶಿವೆಯಲ್ಲಿ ಶಿವನಿಗೆ ಅತ್ಯಂತ ಪ್ರೇಮವಿರುವದೆಂಬುದು ಸಹಜವಾಗಿದೆ. ಹಿಂದೆ ಹೇಳಿದ 'ಅಂಬಿಕಾನಾಥ' ಎಂಬ ನಾಮವು ಮಹೇಶ್ವರನ ವಿವಾಹಮೂರ್ತಿಯನ್ನು ಹೇಳುತ್ತದೆ ; ಈ ಶಿವಾಪ್ರಿಯನೆಂಬುದು "ಉಮಾಸಹಾಯ"ನೆಂಬ ಎರಡನೆಯ ಮೂರ್ತಿಯನ್ನು ಹೇಳುತ್ತದೆ–ಎಂದು ಆಗಮಿಕರು ಹೇಳುತ್ತಾರೆ.

ಉಗ್ರನೆಂಬುದು ಇಪ್ಪತ್ತಮೂರನೆಯ ನಾಮವು. ಎಲ್ಲರಿಗಿಂತ ಮೇಲೆ ಇರುವ ಉತ್ಕೃಷ್ಟತಮನು ಎಂಬುದು ಇದರ ಅರ್ಥವು. ಜಗತ್ತೆಲ್ಲವನ್ನೂ ಚಲಿಸುವಂತೆ ಮಾಡುತ್ತಾ ತಾನೂ ಚಲಿಸುತ್ತಿರುವ ವಾಯುವಿನ ಅಧಿಷ್ಠಾತೃ ದೇವತೆಗೆ ಉಗ್ರನೆಂದು ಹೆಸರು. ಉಗ್ರನೆಂಬುದು ಆ ಅಧಿಷ್ಠಾತೃದೇವತೆಯಾದ ರುದ್ರಮೂರ್ತಿಯ ಹೆಸರು.

ಕಪಾಲಿ ಎಂಬುದು ಮುಂದಿನ ನಾಮವು. ಅನೇಕ ಬ್ರಹ್ಮರನ್ನು ದಾಟಿ ಅವರ ತಲೆಬುರುಡೆಯನ್ನು ತನ್ನ ಕೈಯಲ್ಲಿಟ್ಟುಕೊಂಡಿರುವಾತನು ; ಆದ್ದರಿಂದ ಬಲಾಧಿಕನು, ಮತ್ತು ಸನಾತನನು–ಎಂಬುದನ್ನು ಈ ನಾಮವು ಸೂಚಿಸುತ್ತದೆ. ಇದು ಕಂಕಾಲನಾಥನೆಂಬ ಹದಿನಾರನೆಯ ಮಹೇಶ್ವರಮೂರ್ತಿಯೆಂದು ಆಗಮದಲ್ಲಿದೆ.

ಕಾಮಾರಿ ಎಂಬುದು ಮುಂದಿನ ನಾಮವು. ಮನ್ಮಥನನ್ನು ನಿಗ್ರಹ ಮಾಡಿದವನು ಎಂದದ್ದರಿಂದ 'ವೈರಾಗ್ಯ'ವೆಂಬ ಐಶ್ವರ್ಯವು ಸೂಚಿತವಾಯಿತು. ಪರಮೇಶ್ವರನ ಪ್ರೀತಿಗೆ ಕಾಮವೇ ಅಡ್ಡಿಯಾಗಿರುವದಾದ್ದರಿಂದ ಆತನಿಗೆ ಕಾಮಾರಿ ಎಂದು ಹೆಸರು– ಎಂದೂ ಈ ನಾಮದ ಅರ್ಥವನ್ನು ವಿವರಿಸಬಹುದು. ಇದು ಮಹೇಶ್ವರನ ಏಳನೆಯ ಮೂರ್ತಿಯ ಹೆಸರೆಂದು ಆಗಮವು.

ಅಂಧಕಾಸುರಸೂದನನೆಂಬುದು ಇಪ್ಪತ್ತಾರನೆಯ ನಾಮವು. ಒಂದಾನೊಂದು ಕಾಲದಲ್ಲಿ ದೇವಿಯು ಲೀಲೆಗಾಗಿ ಶಿವನ ಕಣ್ಣುಗಳನ್ನು ಮುಚ್ಚಲು, ಎಲ್ಲೆಲ್ಲಿಯೂ ಕಗ್ಗತ್ತಲೆ ಕವಿದುಕೊಂಡು ಅದರಿಂದ ಅಂಧಕನೆಂಬ ಅಸುರನೊಬ್ಬನು ಹುಟ್ಟಿದನು. ದೇವಿಯು ತನ್ನ ಮಗನೆಂದು ಭಾವಿಸಿದರೂ ತಾಮಸಸ್ವಭಾವನಾದ ಆ ಅಸುರನು ಮೂರುಲೋಕಗಳನ್ನೂ ಅಪಹರಿಸಿ, ಜಗದಂಬೆಗೂ ದ್ರೋಹವನ್ನು ಮಾಡಿದನು. ಆಗ ಪೂಜ್ಯನಾದ ಭಗವಂತನು ಘೋರವಾದ ಯುದ್ಧದಲ್ಲಿ ಆ ಅಸುರನನ್ನು ಗೆದ್ದು ಶೂಲದ ಕೊನೆಯಲ್ಲಿ ಪೋಣಿಸಿ ಲಲಾಟಾಗ್ನಿಯಲ್ಲಿ ಬಹುಕಾಲ ಬೇಯಿಸಿ ಅವನಿಗೆ ಪ್ರಾಯಶ್ಚಿತ್ತವನ್ನು ಮಾಡಿದನು. ಮೊದಲು ತಾನು ಪುತ್ರನಾಗಿ ಮಾಡಿಕೊಂಡಿದ್ದೆನೆಂಬ ಕಾರಣದಿಂದ ದಯೆಯಿಂದ ದೇವಿಯು ಆತನಿಗೆ ಗಣಾಧಿಪತ್ಯವನ್ನು ಕೊಡಿಸಿದಳು– ಎಂದು ವಾಮನಪುರಾಣದಲ್ಲಿದೆ. ಪ್ರಪಂಚದ್ರೋಹಿಯಲ್ಲಿಯೂ ಗುಣಗ್ರಹಣವನ್ನು ಮಾಡಿದಾತನೆಂದು ಈ ನಾಮವು ಸೂಚಿಸುತ್ತದೆ.

ಗಙ್ಗಾಧರೋ ಲಲಾಟಾಕ್ಷಃ ಕಾಲಕಾಲಃ ಕೃಪಾನಿಧಿಃ ।
ಭೀಮಃ ಪರಶುಹಸ್ತಶ್ಚ ಮೃಗಪಾಣಿರ್ಜಟಾಧರಃ ॥ ೪ ॥

## ವಿವರಣೆ

**ಗಂಗಾಧರ :** ಹಿಮವಂತನ ಮಗಳಾದ ಕುಟಿಲೆ ಎಂಬಾಕೆ ಬ್ರಹ್ಮನ ಶಾಪದಿಂದ ನದಿಯಾಗಿ ವೇಗದಿಂದ ಹರಿಯುತ್ತಿರಲು ಭಗೀರಥನ ಪ್ರಾರ್ಥನೆಯಂತೆ ಶಿವನು ಆ ನದಿಯನ್ನು ತನ್ನ ಜಟೆಯಲ್ಲಿ ಧರಿಸಿದನೆಂದು ವಾಮನಪುರಾಣದಲ್ಲಿ ಪ್ರಸಿದ್ಧವಾಗಿರುವ ಕಥೆಯನ್ನು ಈ ನಾಮವು ಸೂಚಿಸುತ್ತದೆ. ಇತರರಿಗೆ ಅಸಾಧ್ಯವಾದ ಕರ್ಮವನ್ನು ಮಾಡಿ ಭಕ್ತರಕ್ಷಣೆಯನ್ನು ಮಾಡಿದವನೆಂಬುದನ್ನು ಈ ನಾಮವು ತಿಳಿಸುತ್ತದೆ.

**ಲಲಾಟಾಕ್ಷ :** ಎಲ್ಲರಿಗೂ ಇರುವ ಸ್ಥಾನಕ್ಕಿಂತ ಹೆಚ್ಚಿನ ಸ್ಥಾನದಲ್ಲಿರುವದೆಂದು ಜ್ಞಾನರೂಪವಾದ ಚಕ್ಷುಸ್ಸನ್ನು ವರ್ಣಿಸಿರುವದರಿಂದ ಎಲ್ಲರಿಗಿಂತಲೂ ಮಿಗಿಲಾದ ಜ್ಞಾನವುಳ್ಳಾತನೆಂದು ಹೇಳಿದಂತಾಯಿತು.

**ಕಾಲಕಾಲ :** ಭಕ್ತನಾದ ಮಾರ್ಕಂಡೇಯನಿಗಾಗಿ ಯಮನನ್ನು ನಿಗ್ರಹಿಸಿದವನಾದ್ದರಿಂದ ಶಿವನು ಕಾಲಕಾಲನು. ಅಥವಾ ಪ್ರಲಯದಲ್ಲಿ

ಸರ್ವವನ್ನೂ ಉಪಸಂಹಾರಮಾಡುವ ರುದ್ರನಾದ್ದರಿಂದ ಕಾಲಕಾಲನು. ಈ ಮೂರ್ತಿಯು ಮಹೇಶ್ವರನ ಎಂಟನೆಯದೆಂದು ಆಗಮಪ್ರಸಿದ್ಧಿ.

ಕೃಪಾನಿಧಿ : ಕೃಪೆಯೆಂದರೆ ಮತ್ತೊಬ್ಬರ ದುಃಖವನ್ನು ತೊಲಗಿಸ ಬೇಕೆಂಬ ಇಚ್ಛೆ. ಕೃಪೆಗೆ ನಿಧಿ ಎಂದದ್ದರಿಂದ ಯಾವಾಗಲೂ ಈತನಲ್ಲಿ ಕೃಪೆಯು ಇದ್ದುಕೊಂಡೇಇರುವದೆಂದು ಹೇಳಿದಂತಾಯಿತು. ಲೋಕದ ಪ್ರಾಣಿಗಳ ಮೇಲೆ ದಯೆಯನ್ನು ತೋರಿಸುವದರಲ್ಲಿ ರುದ್ರನಿಗಿಂತ ಮತ್ತೆಯಾರೂ ಮಿಗಿ ಲಾದವರಿಲ್ಲವೆಂದು ಶ್ರುತಿಯಲ್ಲಿದೆ. ಇಲ್ಲಿಗೆ ಮೂವತ್ತು ನಾಮಗಳಾದವು.

ಭೀಮ : ಯಾವನಿಗೆ ಅಂಜಿ ಎಲ್ಲರೂ ತಮ್ಮತಮ್ಮ ಎಲ್ಲೆಕಟ್ಟಿನಲ್ಲಿಯೇ ಇರುವರೋ ಆತನು ಭೀಮನು. ಭೀಮನೆಂಬುದು ಆಕಾಶಕ್ಕೆ ಅಭಿಮಾನಿಯಾಗಿ ರುವ ಮೂರ್ತಿಯ ಹೆಸರೆಂದು ಶಿವಪುರಾಣದಲ್ಲಿರುತ್ತದೆ.

ಪರಶುಹಸ್ತ : ಪರಶುವೆಂಬುದೊಂದು ಆಯುಧವು. ಅದನ್ನು ಕೈಯಲ್ಲಿ ಧರಿಸಿರುವದರಿಂದ ಶಿವನಿಗೆ ಪರಶುಹಸ್ತನೆಂದು ಹೆಸರು. ಪರಶುವೆಂಬುದು ಸತ್ಯ ನಿಷ್ಠತೆಯೇ ಎಂದು ಶಿವಾಗಮವಿರುತ್ತದೆ. ಆದ್ದರಿಂದ ಪರಮೇಶ್ವರನಿಗೆ ಸತ್ಯವು ಬಲು ಮೆಚ್ಚೆಂಬುದನ್ನು ಈ ನಾಮವು ಸೂಚಿಸುತ್ತದೆ.

ಮೃಗಪಾಣಿ : ದಾರುಕಾವನದಲ್ಲಿ ಮುನಿಗಳು ಮಾಡಿದ ಮಾಟದಿಂದ ಒಂದು ಜಿಂಕೆಯು ಬಂದು ಈಶ್ವರನ ಎಡಗೈಯಾಯಿತೆಂದು ಸ್ಕಾಂದಪುರಾಣ ದಲ್ಲಿ ಕಥೆ. ಜ್ಞಾನವಿಹೀನರಾದವರೆಲ್ಲರೂ ಮೃಗವೇ ಸರಿ ಎಂದು ತಿಳಿಸುವಂತೆ ಪರಮೇಶ್ವರನು ಮುನಿಗಳ ಕುಕೃತ್ಯದಿಂದ ಸ್ವಲ್ಪವೂ ಚಿತ್ತದಲ್ಲಿ ಕದಲದೆ ಮೃಗ ಪಾಣಿಯಾದನು- ಎಂದು ಆ ಪುರಾಣದಲ್ಲಿ ವರ್ಣಿತವಾಗಿರುತ್ತದೆ. ಮಂತ್ರ ಶಾಸ್ತ್ರದಲ್ಲಿ ಮೃಗವೆಂದರೆ ವೇದವೆಂದಿದೆ. ಆ ಪಕ್ಷದಲ್ಲಿ ವೇದವನ್ನೆಲ್ಲ ತನ್ನ ವಶದಲ್ಲಿಟ್ಟುಕೊಂಡಿರುವಾತನು ಎಂದು ಅರ್ಥವಾಗುವದು. ಅಥವಾ ಮೃಗ ವೆಂದರೆ ಹುಡುಕುವದು, ಯಾಚಿಸುವದು. ಯಾಚಿಸುವ ಕೈಯುಳ್ಳವನು ಎಂದರ್ಥವಾಗುವದರಿಂದ ಮುನಿಜನರನ್ನು ಅನುಗ್ರಹಿಸುವದಕ್ಕಾಗಿ ಭಿಕ್ಷಾಟನ ವನ್ನು ಮಾಡಿದಾತನು- ಎಂಬ ವೃತ್ತಾಂತವನ್ನು ಸೂಚಿಸುವ ನಾಮವಿದು.

ಜಟಾಧರ : ಜಟೆಯನ್ನು ತಪಸ್ಸಿಗಾಗಿ ಧರಿಸಿದವನು ಎಂದರ್ಥ. ಸಮಸ್ತ ಸಾಗರಗಳೂ ಕುಲಾಚಲಗಳೂ ನದಿಗಳೂ ಪರಮೇಶ್ವರನ ಜಟಾರೂಪದಿಂದಿರುವ

ವೆಂದು ವರಾಹಪುರಾಣದಲ್ಲಿರುತ್ತದೆ. ಆದ್ದರಿಂದ ಸರ್ವತೀರ್ಥಗಳಿಗೂ ಆಧಾರರೂಪನಾಗಿರುವ ಶಿವನ ಸ್ಮರಣೆಯಿಂದ ಮಾಡಿದ ತೀರ್ಥಯಾತ್ರೆಯೇ ಫಲಕಾರಿಯಾಗುವದೆಂಬುದನ್ನು ಈ ನಾಮವು ಸೂಚಿಸುತ್ತದೆಯೆಂದು ತಿಳಿಯಬಹುದು. ಇಲ್ಲಿಗೆ ಮೂವತ್ತನಾಲ್ಕು ನಾಮಗಳಾದವು.

ಕೈಲಾಸವಾಸೀ ಕವಚೀ ಕಠೋರಸ್ತ್ರಿಪುರಾನ್ತಕಃ ।
ವೃಷಾಙ್ಕೋ ವೃಷಭಾರೂಢೋ ಭಸ್ಮೋದ್ಧೂಲಿತವಿಗ್ರಹಃ ॥೫॥

ವಿವರಣೆ

ಕೈಲಾಸವಾಸಿ : ಕೈಲಾಸವೆಂದರೆ ಶಿವಾಲಯವು. ಅದು ಹಿಮವತ್ಪರ್ವತ, ಮೇರು, ಮಂದರ-ಮುಂತಾದ ಕಡೆಗಳಲ್ಲಿರುವದೆಂದು ಪುರಾಣಗಳಲ್ಲಿ ವರ್ಣಿಸಿರುತ್ತದೆ. ಮೇರುಮಂದರಾದಿಗಳಲ್ಲಿರುವದನ್ನು ಕೂರ್ಮಪುರಾಣದಲ್ಲಿ ವರ್ಣಿಸಿರುತ್ತದೆ; ವೈಕುಂಠದ ಆಚೆಗೆ ಇರುವ ಕೈಲಾಸವನ್ನು ಸ್ಕಾಂದಪುರಾಣದಲ್ಲಿ ಕಾಶೀಖಂಡದಲ್ಲಿ ವರ್ಣಿಸಿರುತ್ತದೆ. ಅದಕ್ಕಿಂತಲೂ ಆಚೆಗೆ ಪರಮಶಿವಲೋಕವೆಂಬುದೊಂದು ಇದೆಯೆಂದೂ ಅಲ್ಲಿಗೆ ಹೋದ ಧ್ಯಾನಯೋಗಿಗಳಿಗೆ ಪುನರಾವೃತ್ತಿಯೇ ಇಲ್ಲವೆಂದೂ ಶಿವಧರ್ಮೋತ್ತರದಲ್ಲಿ ವರ್ಣಿಸಿರುತ್ತದೆ. ಹೀಗೆ ತಾರತಮ್ಯದಿಂದಿರುವ ಕೈಲಾಸಗಳಲ್ಲಿ ವಾಸಮಾಡಿಕೊಂಡಿರುವನಾದ್ದರಿಂದ ಶಿವನಿಗೆ ಕೈಲಾಸವಾಸಿಯೆಂದು ಹೆಸರು.

ಕವಚಿ : ಕವಚವನ್ನು ಯೋಧರು ತೊಡುವಂತೆ ಮಹೇಶ್ವರನು ತೊಟ್ಟುಕೊಂಡಿಲ್ಲ. ಆತನಿಗೆ ಸರ್ವಜ್ಞತ್ವ, ತೃಪ್ತಿ, ಅನಾದಿಬೋಧ, ಸ್ವತಂತ್ರತ್ವ, ಅಲುಪ್ತಶಕ್ತಿ, ಅನಂತಶಕ್ತಿ-ಎಂಬ ಷಡಂಗಗಳಿರುತ್ತವೆ. ಇವುಗಳಲ್ಲಿ ನಾಲ್ಕನೆಯದಾದ ಸ್ವತಂತ್ರತ್ವವೆಂಬುದು ಆತನಿಗೆ ಕವಚವಾಗಿರುತ್ತದೆ. ಕವಚವು ಮತ್ತೊಬ್ಬರಿಗೆ ಶರೀರವು ಕಾಣದಂತೆ ಮಾಡುವದು, ಮತ್ತೊಬ್ಬರು ಪ್ರಯೋಗಿಸಿದ ಬಾಣಾದಿಗಳು ಅದಕ್ಕೆ ಮುಟ್ಟದಂತೆ ಮಾಡುವದು- ಎಂಬ ಎರಡು ಪ್ರಯೋಜನಗಳನ್ನುಂಟುಮಾಡುತ್ತಿರುತ್ತದೆಯಷ್ಟೆ. ಅದರಂತೆಯೇ ಶಿವನಿಗೆ ಸ್ವಾತಂತ್ರ್ಯವೆಂಬ ಅಂಗವಿರುವದರಿಂದ ಆತನು ಯಾರಿಗೂ ದೃಶ್ಯನಾಗದೆ, ಯಾರಿಗೂ ನಿಲುಕದೆ ಇರುತ್ತಾನೆ. ಆದ್ದರಿಂದ 'ಕವಚಿ' ಎಂಬ ನಾಮವು ಒಂದಿಷ್ಟೂ ಅಡ್ಡಿಯಿಲ್ಲದ ಸ್ವಾತಂತ್ರ್ಯವುಳ್ಳಾತನು ಎಂಬುದನ್ನು ತಿಳಿಸುತ್ತದೆ.

ಕಠೋರ : ಕಠೋರನೆಂದರೆ ಕ್ರೂರನು. ಶಿವನಿಗೆ ಘೋರತನು ವೆಂದೂ, ಶಿವತನುವೆಂದೂ ಎರಡು ತನುಗಳಿರುವವು. ಆತನು ಜಗತ್ತಿನ ರಕ್ಷಣೆಗಾಗಿ ಘೋರತನುವನ್ನು ಸ್ವೀಕರಿಸುವನೆಂದು ಆನುಶಾಸನಿಕಪರ್ವದಲ್ಲಿ ಹೇಳಿರುತ್ತದೆ. ಅಥವಾ ಕಠೋರನೆಂದರೆ ಪೂರ್ಣನು ಎಂದರ್ಥ, ಸರ್ವತ್ರವೂ ಪೂರ್ಣನಾಗಿರುವದರಿಂದ ಶಿವನು ಕಠೋರನಾಗಿರುತ್ತಾನೆ.

ತ್ರಿಪುರಾಂತಕ : ಶಿವನು ತ್ರಿಪುರಸಂಹಾರಮಾಡಿದ ಕಥೆಯು ಶ್ರುತಿ ಯಲ್ಲಿಯೂ ಸಕಲಪುರಾಣಗಳಲ್ಲಿಯೂ ಇರುತ್ತದೆ. ಸ್ಥೂಲಸೂಕ್ಷ್ಮಕಾರಣ ಗಳೆಂಬ ಶರೀರಗಳನ್ನು ನಾಶಗೊಳಿಸಿ ವಿದೇಹಕೈವಲ್ಯವನ್ನು ಕೊಡುವಾತನು ಎಂದೂ ಹೇಳಬಹುದು.

ವೃಷಾಙ್ಕ ವೃಷಭವು ಶಿವನಿಗೆ ವಾಹನವೂ ಧ್ವಜವೂ ಆಗಿರುವದೆಂದು ಪುರಾಣಪ್ರಸಿದ್ಧವಾಗಿಸುತ್ತದೆ. ಈ ವೃಷಭವು ಧರ್ಮಸ್ವರೂಪವಾದದ್ದೆಂದು ಶಿವಾಗಮಗಳಲ್ಲಿರುತ್ತದೆ. ಧರ್ಮವೇ ಈತನಿಗೆ ಧ್ವಜವು ಎಂದದ್ದರಿಂದ ಧರ್ಮಪ್ರಿಯನೆಂದು ಹೇಳಿದಂತೆ ಆಯಿತು.

ವೃಷಭಾರೂಢ : ಧರ್ಮರೂಪದಿಂದ ಸರ್ವಕಾಮಗಳನ್ನೂ ಮಳೆಗರೆ ಯುತ್ತಿರುವದರಿಂದ 'ವೃಷಭ'ವೆಂಬ ಹೆಸರು ಗೋವಿಗೆ ಬಂದಿರುತ್ತದೆ. ಪೂರ್ವ ದಲ್ಲಿ ಶಿವನು ಲೋಕಾನುಗ್ರಹಕ್ಕಾಗಿ ತಪಸ್ಸುಮಾಡುತ್ತಿರುವಲ್ಲಿ ಕೆಲವು ಗೋಗಳು ವಿಘ್ನವನ್ನುಂಟುಮಾಡಲಾಗಿ ಅವುಗಳನ್ನೆಲ್ಲ ಆತನು ರೋಷದಿಂದ ಸುಟ್ಟುಹಾಕಿದನು. ಅಗ ಒಂದು ಎತ್ತು ಮಾತ್ರ ಪರಮೇಶ್ವರನನ್ನು ಬಹು ವಾಗಿ ಪ್ರಾರ್ಥಿಸಿ ಶಿವನ ಪುನಸ್ಸನ್ನೊಲಿಸಿಕೊಂಡಿತು. ಅಂದಿನಿಂದ ಶಿವನ ಅನುಗ್ರಹದಿಂದ ಗೋಗಳು ಸಾಧುವಾದವು : ಅವುಗಳ ಬಣ್ಣವೂ ಮಾರ್ಪ ಟ್ಟಿತು. ಶಿವನು ಆ ಎತ್ತನ್ನು ಧ್ವಜವಾಗಿಯೂ ವಾಹನವಾಗಿಯೂ ಮಾಡಿಕೊಂಡನು–ಎಂದು ಭಾರತದಲ್ಲಿ ಕಥೆಯಿದೆ. ಆದ್ದರಿಂದ ಶಿವನು ವೃಷಭಾರೂಢನೆನಿಸಿರುತ್ತಾನೆ. ಅಥವಾ ತ್ರಿಪುರದಹನಕಾಲದಲ್ಲಿ ರಥಕ್ಕೆ ಕಟ್ಟಿದ್ದ ವೇದಾಶ್ವಗಳು ಮುಗ್ಗರಿಸಲು ವಿಷ್ಣುವು ಎತ್ತಿನ ರೂಪದಿಂದ ರಥವನ್ನು ಎತ್ತಿ ನಿಲ್ಲಿಸಿದನು. ಹೀಗೆ ಪರಂಪರೆಯಿಂದ ವೃಷಭವನ್ನೇರಿದವನು ಎಂದಾದರೂ ಅರ್ಥವನ್ನು ಮಾಡಬಹುದು. ಇಲ್ಲಿಗೆ ನಲವತ್ತು ನಾಮಗಳಾದವು.

**ಭಸ್ಮೋದ್ಧೂಲಿತವಿಗ್ರಹ :** ಪಾಪಗಳನ್ನೂ ರೋಗಗಳನ್ನೂ ಮಾಯಾಪಾಶವನ್ನೂ ನಾಶಮಾಡುವದಾದ್ದರಿಂದ ವಿಭೂತಿಗೆ ಭಸ್ಮವೆಂದು ಹೆಸರು ; ಅಥವಾ ಜ್ಞಾನವನ್ನು ಕೊಟ್ಟು ತತ್ತ್ವವನ್ನು ತಿಳಿಸುವದಾದ್ದರಿಂದ ಇದಕ್ಕೆ ಭಸ್ಮವೆಂದು ಹೆಸರು. ಸಕಲಪಾಪಗಳನ್ನೂ ನಾಶಮಾಡಿ ಜ್ಞಾನವನ್ನು ಕೊಡುವ ಭಸ್ಮೋದ್ಧೂಲನವ್ರತವನ್ನು ತಾನೇ ಮೊದಲುಮಾಡಿ ಸಂಪ್ರದಾಯ ಪ್ರವರ್ತಕನಾದನೆಂದು ಉತ್ತರರಾಮಾಯಣದಲ್ಲಿ ವರ್ಣಿತವಾಗಿರುತ್ತದೆ. ಆದ್ದರಿಂದ ಶಿವನು ಪರಮಕಾರುಣಿಕನೆಂದು ಈ ನಾಮವು ಸೂಚಿಸುತ್ತದೆ.

**ಸಾಮಪ್ರಿಯಃ ಸ್ವರಮಯಸ್ತ್ರಯೀಮೂರ್ತಿರನೀಶ್ವರಃ |**
**ಸರ್ವಜ್ಞಃ ಪರಮಾತ್ಮಾ ಚ ಸೋಮಸೂರ್ಯಾಗ್ನಿಲೋಚನಃ || ೬ ||**

## ವಿವರಣೆ

**ಸಾಮಪ್ರಿಯ :** ವೇದಗಳಲ್ಲಿ ಸಾಮವೇದವು ಭಗವಂತನ ವಿಭೂತಿರೂಪ ವಾಗಿರುವದು ; ಅಂಥ ಸಾಮದಲ್ಲಿ ಪ್ರೇಮವುಳ್ಳವನು–ಎಂದರ್ಥ. ಆದ್ದರಿಂದಲೇ ಈಶ್ವರನನ್ನು ಸಾಮದಿಂದ ಸ್ತೋತ್ರಮಾಡುವದರಿಂದಲೇ ಸಾಕ್ಷಾತ್ಕಾರಗೊಳಿಸಿ ಕೊಳ್ಳಬಹುದೆಂದು ಭಾರತಾದಿಗಳಲ್ಲಿ ವರ್ಣಿತವಾಗಿದೆ. ಅಥವಾ ಸಾಮವೆಂದರೆ ಸವಿಮಾತು. ಯಾವಾಗಲೂ ಪ್ರೀತಿಯುಕ್ತವಾದ ಮಧುರವಾದ ಮಾತನ್ನೇ ಆಡುವವನಿಗೆ ಶಿವಲೋಕವು ದೊರೆಯುವದೆಂದು ಶಿವಧರ್ಮೋತ್ತರದಲ್ಲಿ ಹೇಳಿದೆ. ಆದ್ದರಿಂದ ಸಾಮಪ್ರಿಯನೆಂದರೆ ಮಧುರವಾದ ಮಾತಿನಲ್ಲಿ ಪ್ರೇಮ ವಿರುವಾತನು ಎಂದು ಅರ್ಥವನ್ನು ಮಾಡಬಹುದು.

**ಸ್ವರಮಯ** ಸ್ವರಗಳೆಂದರೆ ಅಕಾರದಿಂದ ಹಿಡಿದು ಔಕಾರದವರೆಗಿನ ವರ್ಣಗಳೆಂದರ್ಥ. ಆದರೂ ವೇದಾದಿಯಲ್ಲಿಯೂ ವೇದಾಂತದಲ್ಲಿಯೂ ಪ್ರಯೋಗಿಸುವ ಓಂಕಾರಕ್ಕೆ ಸ್ವರವೆಂಬ ಹೆಸರು ವಿಶೇಷವಾಗಿ ಒಪ್ಪುತ್ತದೆ. ಓಂಕಾರದಲ್ಲಿ ಮಕಾರವೂ ಇದ್ದರೂ ಅದರಲ್ಲಿ, ಅಕಾರ, ಉಕಾರಗಳೆಂಬ ಎರಡು ಸ್ವರಗಳಿರುವದರಿಂದ ಅದನ್ನು ಸ್ವರವೆಂದೇ ಎಣಿಸುತ್ತಾರೆ. ಸ್ವರಮಯನೆಂದರೆ ಸ್ವರದ ಅವಯವನು ಎಂದರ್ಥ ; ಮಯ ಎಂಬ ಪ್ರತ್ಯಯಕ್ಕೆ ವಿಕಾರ, ಅವಯವ –ಎಂಬ ಅರ್ಥಗಳುಂಟು. ಓಂಕಾರಾವಯವವಾಚ್ಯನೆಂಬರ್ಥವು ಏರ್ಪಡುತ್ತದೆ. ಅಥವಾ ಓಂಕಾರದಿಂದ ತ್ರಿಮೂರ್ತ್ಯಾತ್ಮಕನಾಗಿರುವ ಶಿವನನ್ನು ವಾಚ್ಯವಾಚಕ

ಗಳ ಅಭೇದಸಂಬಂಧದಿಂದ ಹೇಳಿ, ಅದರಲ್ಲಿರುವ ಅಕಾರ, ಉಕಾರ, ಮಕಾರ ಗಳಾದ ಬಳಿಕವಿರುವ ನಾದವೆಂಬ ಅರ್ಧಮಾತ್ರೆಯಿಂದ ಮೂರ್ತಿತ್ರಯವನ್ನು ಮೀರಿರುವ ಶಿವನನ್ನು ಹೇಳುವದರಿಂದಲೂ ಶಿವನು ಸ್ವರಮಯನೆನಿಸುತ್ತಾನೆ.

ತ್ರಯೀಮೂರ್ತಿ : ತ್ರಯೀ ಎಂದರೆ ಋಗ್ಯಜುಸ್ಸಾಮರೂಪವಾದ ವೇದವು. ವೇದವೆಂಬುದು ದೇವೀರೂಪವೆಂದು ಕೂರ್ಮಪುರಾಣದಲ್ಲಿದೆ. ಶಬ್ದಸಮೂಹವೆಲ್ಲವೂ ದೇವಿಯು, ಅರ್ಥಸ್ವರೂಪವೆಲ್ಲವೂ ಶಿವನು- ಎಂಬ ಶಿವಪುರಾಣದ ಪ್ರಮಾಣದಿಂದ ದೇವಿಯ ಮೂಲಕವಾಗಿ ಶಿವನೂ ತ್ರಯೀಮೂರ್ತಿ ಎನಿಸುತ್ತಾನೆ.

ಅನೀಶ್ವರ : ತನಗೆ ಮತ್ತೊಬ್ಬ ಒಡೆಯನಿಲ್ಲದವನು ಎಂದರ್ಥ. ಆತನು ಎಲ್ಲಕ್ಕೂ ಕಾರಣನಾಗಿ ಎಲ್ಲವನ್ನೂ ಆಳುತ್ತಿರುವವನಾದ್ದರಿಂದ ಅವನನ್ನು ಆಳುವ ಮತ್ತೊಬ್ಬನಿಲ್ಲ.

ಸರ್ವಜ್ಞ : ಎಲ್ಲವನ್ನೂ ಬಲ್ಲವನು. ನಿತ್ಯವಾದ ತನ್ನ ಜ್ಞಾನದಿಂದ ಅವನು ಎಲ್ಲವನ್ನೂ ಯಾವಾಗಲೂ ಅರಿಯುತ್ತಿರುತ್ತಾನೆ.

ಪರಮಾತ್ಮ : ಸರ್ವಜೀವರುಗಳಿಗೂ ಅಂತರ್ಯಾಮಿಯು. ಸರ್ವಗತ ನಾಗಿರುವದರಿಂದಲೂ ಸರ್ವರೂಪನಾಗಿರುವದರಿಂದಲೂ ಸರ್ವಾಧಾರನಾಗಿರು ವದರಿಂದಲೂ ಪರಮಾತ್ಮನು. ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಅಹಂ ಕಾರ- ಇವು ಅವಿದ್ಯೆಯಿಂದ ನಮ್ಮಗಳ ಸ್ವರೂಪವಾಗಿ ಕಲ್ಪಿತವಾಗಿರುವದ ರಿಂದ ಅಪರಮವಾದ ಆತ್ಮಗಳು. ಅವೆಲ್ಲಕ್ಕಿಂತಲೂ ಸೂಕ್ಷ್ಮವಾಗಿ ಒಳಗೆ ಇರುವ ನಮ್ಮ ಪರಮಾರ್ಥಸ್ವರೂಪವಾಗಿರುವದರಿಂದ ಶಿವನು ಪರಮಾತ್ಮನು.

ಸೋಮಸೂರ್ಯಾಗ್ನಿಲೋಚನ : ತೇಜೋರೂಪರಾದ ಚಂದ್ರ ಸೂರ್ಯಾಗ್ನಿಗಳೇ ಶಿವನ ಕಣ್ಣುಗಳಾಗಿರುತ್ತಾರೆಂದರ್ಥ. ಇಲ್ಲಿಗೆ ನಲವತ್ತೆಂಟು ನಾಮಗಳಾದವು.

**ಹವಿರ್ಯಜ್ಞಮಯಃ ಸೋಮಃ ಪಞ್ಚವಕ್ತ್ರಃ ಸದಾಶಿವಃ |**
**ವಿಶ್ವೇಶ್ವರೋ ವೀರಭದ್ರೋ ಗಣನಾಥಃ ಪ್ರಜಾಪತಿಃ || ೭ ||**

ಹವಿಸ್ಸು : ಹವಿರ್ದ್ರವ್ಯಗಳಲ್ಲಿ ಬಹುಮಟ್ಟಿಗೆ ಪಾರ್ಥಿವವಸ್ತುಗಳೇ ಹೆಚ್ಚಾಗಿರುತ್ತವೆಯಾದ್ದರಿಂದಲೂ ಭಗವಂತನ ಅಷ್ಟಮೂರ್ತಿಗಳಲ್ಲಿ ಪೃಥಿವಿ ಯೇ ಮೊದಲನೆಯದಾದ್ದರಿಂದಲೂ ಪರಶಿವನು ಹವಿಸ್ಸಿನ ರೂಪವಾಗಿರು ತ್ತಾನೆ. ಅಥವಾ ಹವಿಯೆಲ್ಲವೂ ದೇವಿಯು, ಹವಿಯನ್ನುಂಟುಮಾಡು ವಾತನೇ ಶಿವನು-ಎಂದು ಶಿವಪುರಾಣದಲ್ಲಿರುವದರಿಂದ ದೇವಿಗೂ ಶಿವನಿಗೂ ಅಭೇದವನ್ನು ಮನಸ್ಸಿನಲ್ಲಿಟ್ಟುಕೊಂಡು ಶಿವನೂ ಹವಿಸ್ಸಿನ ರೂಪವಾಗಿರು ತ್ತಾನೆಂದು ಹೇಳಿದೆ.

ಯಜ್ಞಮಯಃ : ಯಾವನಿಗಾಗಿ ಯಜ್ಞಗಳನ್ನಾರಂಭಿಸುವರೋ ಅಂಥ ಯಜ್ಞಸ್ವಾಮಿಯಾದ್ದರಿಂದ ಶಿವನು ಯಜ್ಞಮಯನೆನಿಸುವನು.

ಸೋಮಃ : ಉಮಾದೇವಿಯೊಡನೆ ಇರುವಾತನಾದ್ದರಿಂದ ಈ ದೇವನು ಸೋಮನು. ಅಥವಾ ಸೋಮಲತೆಗೆ ಅಧಿಷ್ಠಾತೃದೇವತೆಯಾದ್ದರಿಂದ ಸೋಮನು.

ಪಞ್ಚವಕ್ತ್ರ : ದೇವಕಾರ್ಯಕ್ಕಾಗಿ ಸುಂದೋಪಸುಂದರನ್ನು ಮೋಹ ಗೊಳಿಸುವ ಉದ್ದೇಶದಿಂದ ತನಗೆ ಪ್ರದಕ್ಷಿಣೆಯನ್ನು ಮಾಡಿದ ತಿಲೋತ್ತಮೆ ಯನ್ನು ಕುತೂಹಲದಿಂದಲೂ ಅನುಗ್ರಹಬುದ್ಧಿಯಿಂದಲೂ ನೋಡುವದ ಕ್ಕಾಗಿ ನಾಲ್ಕು ದಿಕ್ಕುಗಳಲ್ಲಿಯೂ ಸೃಷ್ಟಿಮಾಡಿಕೊಂಡ ನಾಲ್ಕು ಮುಖಗಳು, ಆ ಮೊದಲೇ ಇದ್ದ ಒಂದು ಮುಖ- ಹೀಗೆ ಐದು ಮುಖವುಳ್ಳವನು ಶಿವನು. ಈಶ್ವರನ ಪೂರ್ವಮುಖವು ಯಾವಾಗಲೂ ತಪಶ್ಚರ್ಯೆಯನ್ನು ಮಾಡುತ್ತಿ ರುವದು; ದಕ್ಷಿಣಮುಖವು ಪ್ರಜೆಗಳ ಸಂಹಾರವನ್ನು ಮಾಡುವದು, ಪಶ್ಚಿಮ ಮುಖವು ಲೋಕಕಾರ್ಯವನ್ನು ಮಾಡುವದು, ಉತ್ತರಮುಖವು ಯಾವಾಗ ಲೂ ವೇದಾಧ್ಯಯನವನ್ನು ಮಾಡುತ್ತಿರುವದು-ಎಂದು ಅನುಶಾಸನಿಕ ಪರ್ವದಲ್ಲಿ ವರ್ಣಿತವಾಗಿರುತ್ತದೆ.

ಈ ತಿಲೋತ್ತಮೆಯ ಕಥೆಯಲ್ಲಿ ಪರಮೇಶ್ವರನ ಭಕ್ತವಾತ್ಸಲ್ಯವನ್ನು ವರ್ಣಿಸಿದೆಯೇ ಹೊರತು ಆತನ ಪಂಚವಕ್ತ್ರಗಳು ಈಚೆಗೆ ಸೃಷ್ಟಿಯಾದವು ಗಳೆಂದು ತಾತ್ಪರ್ಯದಿಂದ ಹೇಳಿದೆಯೆಂದು ಭಾವಿಸಬಾರದು. ಏಕೆಂದರೆ ಶಿವನಿಗೆ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ-ಎಂಬ ಪಂಚಬ್ರಹ್ಮಾತ್ಮಕವಾದ ಮುಖಗಳು ಅನಾದಿಯಾಗಿರುವವೆಂದು ಪುರಾಣ

ದಲ್ಲಿಯೂ ಆಗಮದಲ್ಲಿಯೂ ಪ್ರಸಿದ್ಧವಾಗಿರುತ್ತದೆ. (೧) ಭೂತಪಂಚಕ, (೨) ತನ್ಮಾತ್ರಪಂಚಕ, (೩) ಕರ್ಮೇಂದ್ರಿಯಪಂಚಕ, (೪) ಜ್ಞಾನೇಂದ್ರಿಯ ಪಂಚಕ, (೫) ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು- ಎಂಬ ತತ್ತ್ವಪಂಚಕ, (೬) ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯತೀತ- ಎಂಬ ಕಲಾಪಂಚಕ, (೭) ಬ್ರಹ್ಮ,ವಿಷ್ಣು,ರುದ್ರ,ಮಹೇಶ್ವರ, ಸದಾಶಿವ-ಎಂಬ ಮೂರ್ತಿಪಂಚಕ, (೮) ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಮೂರ್ತ ಸಾದಾಖ್ಯ, ಕರ್ತೃಸಾದಾಖ್ಯ, ಕರ್ಮಸಾದಾಖ್ಯ-ಎಂಬ ಸಾದಾಖ್ಯಪಂಚಕ- ಈ ರೂಪಗಳಿಂದ ಆ ಪಂಚಬ್ರಹ್ಮಗಳಿರುವವೆಂದು ಶಿವಪುರಾಣದಲ್ಲಿಯೂ ಆಗಮದಲ್ಲಿಯೂ ಬರೆದಿರುತ್ತದೆ. ಆದ್ದರಿಂದ ಪಂಚವಕ್ತ್ರನೆಂಬ ನಾಮವು ಶಿವನು ಸರ್ವಾತ್ಮಕನೆಂಬುದನ್ನು ತಿಳಿಸುತ್ತದೆ ಎಂದು ತಿಳಿಯಬೇಕು.

**ಸದಾಶಿವ :** ಯಾವಾಗಲೂ ಇರುವ ಶಿವನು. ಬ್ರಹ್ಮ, ವಿಷ್ಣು, ರುದ್ರ, ಮಹೇಶ್ವರ-ಎಂಬ ನಾಲ್ಕು ಮೂರ್ತಿಗಳಿಗೆ ಹೋಲಿಸಿದರೆ ಸದಾಶಿವ ಮೂರ್ತಿಯು ಯಾವಾಗಲೂ ಇರುವದಾದ್ದರಿಂದ ಅನ್ವರ್ಥನಾಮವಿದು. ಅಥವಾ ಪರಮೇಶ್ವರನು ಯಾವ ಕಾಲಪರಿಚ್ಛೇದನೂ ಇಲ್ಲದವನು- ಎಂಬು ದನ್ನು ತಿಳಿಸುವದಕ್ಕಾಗಿ "ಸದಾಶಿವ" ಎಂಬ ನಾಮವು ಬಂದಿರುತ್ತದೆ- ಎಂದಾದರೂ ತಿಳಿಯಬಹುದು.

**ವಿಶ್ವೇಶ್ವರ ;** ಎಲ್ಲರಿಗೂ ಈಶ್ವರನಾದ್ದರಿಂದ ವಿಶ್ವೇಶ್ವರನು.

**ವೀರಭದ್ರ :** ವೀರಭದ್ರನೆಂಬಾತನು ದಕ್ಷಾಧ್ವರವನ್ನು ನಾಶಗೊಳಿಸು ವದಕ್ಕಾಗಿ ಶಿವನು ಸೃಷ್ಟಿಸಿದ ಗಣೇಶ್ವರನು. ಅಥವಾ ವೀರರಲ್ಲಿ ಶ್ರೇಷ್ಠನಾದ ವನು.

**ಗಣನಾಥ :** ಗಣಗಳ ಒಡೆಯನಾದ್ದರಿಂದ ವೀರಭದ್ರನಿಗೆ ಗಣನಾಥ ನೆಂದು ಹೆಸರು. ವೀರಭದ್ರನನ್ನು ಸೃಷ್ಟಿಸಿ ಅವನ ಮೂಲಕವಾಗಿ ಗಣಗಳ ನ್ನು ಸೃಷ್ಟಿಸಿದನು- ಎಂಬ ಕಥೆಯನ್ನು ಈ ನಾಮವು ಸೂಚಿಸುತ್ತದೆ. ಅಥವಾ ನಂದಿ, ಭೃಂಗಿ, ಮಹಾಕಾಲ-ಮುಂತಾದ ಗಣಗಳಿಗೆ ಒಡೆಯನಾದ ವನು ಎಂದರ್ಥ.

ಪ್ರಜಾಪತಿ : ವೀರಭದ್ರನ ಅವತಾರವನ್ನು ಪುರಾಣಗಳಲ್ಲಿ ಬಗೆಬಗೆಯಾಗಿ ವರ್ಣಿಸಿರುತ್ತದೆ. ಸೃಷ್ಟಿಯ ಆದಿಯಲ್ಲಿ ಬ್ರಹ್ಮನ ಹಣೆಯಿಂದ "ಸ್ಥಾಣೂರುದ್ರ"ನೆಂಬ ರುದ್ರನು ಸೃಷ್ಟನಾದನು. ಆತನು ಪ್ರಜಾಪತಿಗಳಲ್ಲಿ ಒಬ್ಬನಾಗಿದ್ದರೂ ಸೃಷ್ಟಿಮಾಡದೆ ಜಲದಲ್ಲಿ ಮುಳುಗಿ ತಪಸ್ಸುಮಾಡುತ್ತಿದ್ದನು. ಆತನೇ ಕಾಲಾಂತರದಲ್ಲಿ ಮೇಲಕ್ಕೆದ್ದು ಗಣಗಳನ್ನು ಸೃಷ್ಟಿಸಿ ಅವರಿಂದೊಡಗೂಡಿ ದಕ್ಷನನ್ನು ಯಜ್ಞದಲ್ಲಿ ಸಂಹರಿಸಿದನು-ಎಂದು ವರಾಹಪುರಾಣದಲ್ಲಿರುತ್ತದೆ. ಅಸಂಖ್ಯಾತರಾದ ರುದ್ರರ ಸೃಷ್ಟಿಯೆಲ್ಲವೂ ಈತನ ವಶವಾಗಿರುವದರಿಂದ ಈತನು ಪ್ರಜಾಪತಿಯಾಗಿರುತ್ತಾನೆ. ಇಲ್ಲಿಗೆ ಐವತ್ತೇಳು ನಾಮಗಳಾದವು.

ಹಿರಣ್ಯರೇತಾ ದುರ್ಧರ್ಷೋ ಗಿರೀಶೋ ಗಿರಿಶೋಽನಘಃ ।
ಭುಜಙ್ಗಭೂಷಣೋ ಭರ್ಗೋ ಗಿರಿಧನ್ವಾ ಗಿರಿಪ್ರಿಯಃ ॥ ೮ ॥

## ವಿವರಣೆ

ಹಿರಣ್ಯರೇತಸ್ಸು : ಸೃಷ್ಟಿಯ ಆದಿಯಲ್ಲಿ ರುದ್ರನು ಅಪ್ತತ್ತ್ವವನ್ನು ಸೃಷ್ಟಿಸಿ ಅದರಲ್ಲಿ ತನ್ನ ವೀರ್ಯವನ್ನು ಬಿಡಲು ಅದು ಚಿನ್ನದರೂಪವಾದ ಬ್ರಹ್ಮಾಂಡವಾಯಿತೆಂದು ಸ್ಕಾಂದಪುರಾಣದಲ್ಲಿದೆ. ಕುಮಾರೋತ್ಪತ್ತಿಗಾಗಿ ಬಿಟ್ಟ ಶಿವನ ರೇತಸ್ಸು ವನವನ್ನೆಲ್ಲ ಹಿರಣ್ಯಮಯವಾಗಿ ಮಾಡಿತೆಂದು ಬಾಲಕಾಂಡದಲ್ಲಿರುವ ಕಥೆಯನ್ನಾದರೂ ಈ ನಾಮದಿಂದ ಗ್ರಹಿಸಬಹುದು.

ದುರ್ಧರ್ಷ : ಯಾವನಿಗೂ ಈತನನ್ನು ಎದುರಿಸುವದು ಆಗಲಾರದು.

ಗಿರೀಶ : ಕೈಲಾಸ, ಮೇರು, ಮಂದರ- ಮುಂತಾದವುಗಳ ಒಡೆಯನು. ಈಶ್ವರನು ಪರ್ವತಗಳಿಗೆಲ್ಲ ಒಡೆಯನೆಂಬುದನ್ನು ಪುರಾಣದಲ್ಲಿ ವರ್ಣಿಸಿರುತ್ತದೆ. ಇದು ಅರವತ್ತನೆಯ ನಾಮವು.

ಗಿರಿಶ : ಕೈಲಾಸಪರ್ವತದಲ್ಲಿ ಇರುವಾತನು. ಅಥವಾ ಮೇರುಪರ್ವತವನ್ನು ಧನುಸ್ಸುಮಾಡಿ ಬಗ್ಗಿಸಿದಾತನು.

ಅನಘ : ಯಾವ ಪಾಪವೂ ಇಲ್ಲದವನು, ಯಾವ ದುಃಖವೂ ಇಲ್ಲದವನು.

ಭುಜಂಗಭೂಷಣ : ದಾರುಕಾವನದಲ್ಲಿದ್ದ ಮುನಿಗಳು ಮಾಡಿದ ಆಭಿಚಾರಕರ್ಮದಿಂದ ಹುಟ್ಟಿದ ಹಾವುಗಳು ಗರುಡನ ಅಂಜಿಕೆಯಿಂದ ಶರಣಾಗತವಾಗಲು ಅವುಗಳನ್ನು ಶಿವನು ಆಭರಣವಾಗಿ ಧರಿಸಿದನೆಂದು ಸ್ಕಾಂದ ಪುರಾಣದ ಕಥೆ. ಜನರನ್ನು ಉದ್ವೇಗಗೊಳಿಸುವಂಥ ಪ್ರಾಣಿಗಳುಕೂಡ ಈತನಿಗೆ ಆಭರಣಗಳಾದವೆಂಬ ಮಹಿಮೆಯು ಇದರಿಂದ ಸೂಚಿತವಾಯಿತು.

ಭರ್ಗ : ಪಾಪಗಳನ್ನೆಲ್ಲ ಸುಟ್ಟುರುಹುವಾತನು. ಶಿವನು ಸರ್ವಪಾಪ ಗಳನ್ನೂ ಸುಟ್ಟುರುಹುವಾತನೆಂಬುದು ಶಿವಧರ್ಮೋತ್ತರವೇ ಮುಂತಾದ ಪುರಾಣಗಳಲ್ಲಿ ಪ್ರಸಿದ್ಧವಾಗಿದೆ.

ಗಿರಿಧನ್ವಾ : ಮೇರುಪರ್ವತವೆಂಬ ಧನುಸ್ಸುಳ್ಳವನು.

ಗಿರಿಪ್ರಿಯ : ಪರ್ವತಗಳೆಲ್ಲವೂ ಪುಣ್ಯದೇಶಗಳೆಂದು ಭಾರತದಲ್ಲಿದೆ ; ಆದ್ದರಿಂದ ಶಿವನು ಗಿರಿಪ್ರಿಯನು, ಎಂದರೆ ಪುಣ್ಯದೇಶಗಳಲ್ಲಿ ಪ್ರೀತಿಯಿರು ವವನು. ಇಲ್ಲಿಗೆ ಅರುವತ್ತಾರು ನಾಮಗಳಾದವು.

ಕೃತಿವಾಸಾಃ ಪುರಾರಾತಿರ್ಭಗವಾನ್ ಪ್ರಮಥಾಧಿಪಃ ।
ಮೃತ್ಯುಂಜಯಃ ಸೂಕ್ಷ್ಮತನುರ್ಜಗದ್ವ್ಯಾಪೀ ಜಗದ್ಗುರುಃ ॥ ೯ ॥

ವಿವರಣೆ

ಕೃತ್ತಿವಾಸಸ್ಸು ದಾರುಕಾವನದ ಮುನಿಗಳು ಮಾಡಿದ ಆಭಿಚಾರ ದಿಂದ ಒಂದು ಹುಲಿ ಹುಟ್ಟಿಬಂತು. ಅದರ ಚರ್ಮವನ್ನು ಸುಲಿದು ಶಿವನು ಧರಿಸಿ ಕೊಂಡನು. ಅಥವಾ ಕಾಶಿಯಲ್ಲಿ, ಶಿವಭಕ್ತರನ್ನು ಕೊಲ್ಲುವದಕ್ಕಾಗಿ ಬಂದ ಗಜಾಸುರನ ಚರ್ಮವನ್ನು ಧರಿಸಿದವನು ಶಿವನು. ಈ ಎರಡು ಕಥೆಗಳೂ ಸ್ಕಾಂದದಲ್ಲಿವೆ. ಗಜಾರಿ ಎಂಬುದು ಮಹೇಶ್ವರನ ಹನ್ನೊಂದನೆಯ ಮೂರ್ತಿಯ ಹೆಸರೆಂದು ಆಗಮದಲ್ಲಿದೆ.

ಪುರಾರಾತಿ : ಪುರಗಳಿಗೆ ಎಂದರೆ ಸ್ಥೂಲಸೂಕ್ಷ್ಮಕಾರಣವೆಂಬ ಮೂರು ಶರೀರಗಳಿಗೆ ವೈರಿಯು, ಎಂದರೆ ವಿದೇಹಕೈವಲ್ಯವನ್ನು ಕೊಡವಾತನು ಎಂದರ್ಥ.

ಭಗವಾನ್ : ಸಮಗ್ರವಾದ ಐಶ್ವರ್ಯ, ವೀರ್ಯ, ಯಶಸ್ಸು, ಶ್ರೀ, ಜ್ಞಾನ, ವೈರಾಗ್ಯ– ಇವುಗಳಿಗೆ ಭಗವೆಂದು ಹೆಸರು. ಇವುಗಳನ್ನುಳ್ಳವನು ಭಗವಾನ್.

**ಪ್ರಮಥಾಧಿಪ** : ಭಕ್ತರನ್ನು ಕಾಪಾಡಿ ಅವೈದಿಕರನ್ನು ನಾಶಗೊಳಿಸುವದರಿಂದ ಶಿವನ ಪಾರ್ಷದರಿಗೆ ಪ್ರಮಥರೆಂದು ಹೆಸರು. ಅವರುಗಳಿಗೊಡೆಯನು ಶಿವನು.

**ಮೃತ್ಯುಂಜಯ** : ತನ್ನ ಭಕ್ತರುಗಳ ಮೃತ್ಯುವನ್ನು ಪರಿಹರಿಸುವಾತನು.

**ಸೂಕ್ಷ್ಮತನು** : ಸೂಕ್ಷ್ಮವಾದ ಶರೀರವುಳ್ಳವನು ; ಅಥವಾ ಸೂಕ್ಷ್ಮಕ್ಕಿಂತಲೂ ಸೂಕ್ಷ್ಮನಾದವನು–ಎಂದರ್ಥ.

**ಜಗದ್ವ್ಯಾಪೀ** : ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡಿರುವಾತನು.

**ಜಗದ್ಗುರು** : ಜಗತ್ತಿಗೆಲ್ಲ ಮೊದಲನೆಯ ಗುರು. ಜಗತ್ತಿಗೆ ಪಿತಾಮಹನೆನಿಸಿಕೊಂಡಿರುವ ಬ್ರಹ್ಮನಿಗೆಕೂಡ ಶಿವನು ಗುರುವಾಗಿರುವಾತನೆಂದು ಶ್ರುತಿಪ್ರಸಿದ್ಧವಾಗಿದೆ. ಇದು **ದಕ್ಷಿಣಾಮೂರ್ತಿ**ಯೆಂಬ ಮಹೇಶ್ವರನ ಇಪ್ಪತ್ತನಾಲ್ಕನೆಯ ಮೂರ್ತಿಯ ಹೆಸರೆಂದು ಆಗಮದಲ್ಲಿದೆ. ಇಲ್ಲಿಗೆ ಎಪ್ಪತ್ತನಾಲ್ಕು ನಾಮಗಳಾದವು.

**ವ್ಯೋಮಕೇಶೋ ಮಹಾಸೇನಜನಕಶ್ಚಾರುವಿಕ್ರಮಃ ।**
**ರುದ್ರೋ ಭೂತಪತಿಃ ಸ್ಥಾಣುರಹಿರ್ಬುಧ್ನ್ಯೋ ದಿಗಮ್ಬರಃ ॥೧೦॥**

## ವಿವರಣೆ

**ವ್ಯೋಮಕೇಶ** : ಗಂಗೆಯನ್ನು ಧರಿಸಿದ ಕಾಲದಲ್ಲಿ ಆಕಾಶದಂತೆ ವ್ಯಾಪಿಸಿಕೊಂಡ ಜಡೆಯುಳ್ಳವನಾದ್ದರಿಂದ ಶಿವನಿಗೆ ವ್ಯೋಮಕೇಶನೆಂದು ಹೆಸರು. ಅಥವಾ ಆಕಾಶವೇ ಯಾವಾತನಿಗೆ ಕೇಶವೋ ಆ ಶಿವನು ವ್ಯೋಮಕೇಶನು.

**ಮಹಾಸೇನಜನಕನು** : ದೇವತೆಗಳ ದೊಡ್ಡ ಸೇನೆಯ ಒಡೆಯನಾದ್ದರಿಂದ ಸ್ಕಂದನಿಗೆ ಮಹಾಸೇನನೆಂದು ಹೆಸರು. ಆ ಸ್ಕಂದನ ತಂದೆಯು ಮಹಾಸೇನಜನಕನು. ಇದು ಮಹೇಶ್ವರನ **ಸೋಮಸ್ಕಂದ**ನೆಂಬ ಇಪ್ಪತ್ತೊಂದನೆಯ ಮೂರ್ತಿಯು.

**ಚಾರುವಿಕ್ರಮ** : ಮನೋಹರವಾದ ಪರಾಕ್ರಮವುಳ್ಳವನು, ಕಡೆಗಣ್ಣು, ಹುಸಿನಗೆ– ಮುಂತಾದವುಗಳಿಂದ ಈತನ ಪರಾಕ್ರಮವುಕೂಡ ಮನೋಹರವಾಗಿರುವದೆಂದು ಇಲ್ಲಿ ಹೇಳಿರುವದರಿಂದ ಕಾಲಹೆಬ್ಬೆರಳನ್ನು

ನೆಲದಮೇಲೆ ಎಳೆದಮಾತ್ರದಿಂದ ಸುದರ್ಶನವು ಎದ್ದು ಜಲಂಧರನನ್ನು ಕೊಂದುಹಾಕಿತೆಂಬ ಕಥೆಯನ್ನುಕೂಡ ಈ ಲೀಲಾಪರಾಕ್ರಮದಲ್ಲಿ ಸೇರಿಸ ಬೇಕು. 'ಜಲಂಧರವಧ'ವೆಂಬುದು ಮಹೇಶ್ವರನ ಹತ್ತನೆಯ ಮೂರ್ತಿ ಯೆಂದು ಆಗಮದಲ್ಲಿ ಪ್ರಸಿದ್ಧ.

**ರುದ್ರ :** ಅಂತಕಾಲದಲ್ಲಿ ಎಲ್ಲರನ್ನೂ ಅಳುವಂತೆ ಮಾಡುತ್ತಾನಾದ್ದ ರಿಂದ ಇವನಿಗೆ ರುದ್ರನೆಂದು ಹೆಸರು. ಬ್ರಹ್ಮನಿಗೆ ಅನುಗ್ರಹವನ್ನುಂಟು ಮಾಡುವದಕ್ಕಾಗಿ ಆತನ ಹಣೆಯಿಂದ ಹುಟ್ಟಿ ಪರಮೇಶ್ವರನು ಶೈಶವದಲ್ಲಿ ಆವನ ಸಂತೋಷಕ್ಕಾಗಿ ಅತ್ತನು- ಎಂದು ಭಾರತದಲ್ಲಿದೆ. ಆದ್ದರಿಂದಲೂ ಇವನಿಗೆ ರುದ್ರನೆಂದು ಹೆಸರು. ರುತ್ ಎಂದರೆ ದುಃಖವು ಅಥವಾ ದುಃಖ ಕಾರಣವಾದ ಅಜ್ಞಾನವು; ಅದನ್ನು ತೊಲಗಿಸುವವನಾದ್ದರಿಂದ ರುದ್ರನು. ಸೂರ್ಯಾಧಿಷ್ಠಾತೃವಾದ ದೇವತೆಗೆ ರುದ್ರನೆಂದು ಹೆಸರು ; ರೋಗವನ್ನು ಪರಿಹಾರಮಾಡುವಾತನು ಎಂದು ಆ ಶಬ್ದಕ್ಕೆ ಅರ್ಥ.

**ಭೂತಪತಿ :** ಸಾಯಂಕಾಲದಲ್ಲಿ ಜನರನ್ನು ಪೀಡಿಸುವದಕ್ಕಾಗಿ ಹೊರಡುವ ಭೂತಗಳಿಗೆ ನಟನವನ್ನು ತೋರಿಸಿ ಅವರನ್ನು ಪರವಶರಾಗಿ ಮಾಡಿ ಶಿವನು ಕಟ್ಟಿನಲ್ಲಿಟ್ಟಿರುತ್ತಾನೆಂದು ಭಾರತಾದಿಗಳಲ್ಲಿ ಪ್ರಸಿದ್ಧವಾಗಿದೆ. ಇದು ಮಹೇಶ್ವರನ ನೃತ್ಯರೂಪವಾದ ನಾಲ್ಕನೆಯ ಮೂರ್ತಿಯೆಂದು ಆಗಮ ದಲ್ಲಿದೆ.

**ಸ್ಥಾಣು :** ತ್ರಿಪುರವಿಜಯಕಾಲದಲ್ಲಿ ಧನುಸ್ಸನ್ನು ಸಜ್ಜುಗೊಳಿಸಿ ಕೊಂಡು ಮೂರು ಪುರಗಳೂ ಕೂಡುವದನ್ನೇ ಕಾದುಕೊಂಡು ನೋಡುತ್ತಿ ದ್ದದ್ದರಿಂದ ಸ್ಥಾಣುವೆನಿಸಿರುತ್ತಾನೆ. ಅಥವಾ ಸ್ಥಾಣುವಿನಂತೆ ಎಂದರೆ ಮೋಟುಮರದಂತೆ ನಿಶ್ಚಲನಾಗಿದ್ದಾನೆಂಬುದನ್ನು ಈ ನಾಮವು ತಿಳಿಸುತ್ತದೆ. ಅಥವಾ ಮಹಾಲಿಂಗವು ತೋರಿಕೊಂಡಕಾಲಕ್ಕೆ ಜ್ಯೋತಿರ್ಲಿಂಗರೂಪದಿಂದ ನಿಶ್ಚಲನಾಗಿದ್ದನೆಂಬ ಕಥೆಯನ್ನು ಈ ನಾಮವು ಸೂಚಿಸುತ್ತದೆ. ಈ ಮೂರ ನೆಯ ಅರ್ಥವನ್ನು ತೆಗೆದುಕೊಂಡರೆ ಸದಾಶಿವವ್ಯೂಹದಲ್ಲಿ ಸೇರಿರುವ ಅಮೂರ್ತಸಾದಾಖ್ಯವನ್ನು ಈ ನಾಮವು ತಿಳಿಸಿದಂತಾಯಿತೆಂದು ಹೇಳ ಬಹುದು. ಇಲ್ಲಿಗೆ ಎಂಬತ್ತು ನಾಮಗಳಾದವು.

ಅಹಿರ್ಬುಧ್ನ್ಯ : ಬುಧ್ನವೆಂದರೆ ಮೂಲವು. ಬ್ರಹ್ಮಾಂಡಕ್ಕೆ ಮೂಲವಾಗಿರುವ ಪಾತಾಲದಲ್ಲಿರುವ ಅಹಿ ಎಂದರೆ ಸರ್ಪವು, ಎಂದರೆ ಶೇಷನು. ಶೇಷನು ತಾಮಸಮೂರ್ತಿಯೆಂದೂ ರುದ್ರಾತ್ಮಕನಾದ ಸಂಕರ್ಷಣನು ಪ್ರಕಟವಾಗುವ ಸ್ಥಾನವೆಂದೂ ವಿಷ್ಣುಪುರಾಣದಲ್ಲಿ ವರ್ಣಿತವಾಗಿರುತ್ತದೆ. ಈ ನಾಮದಲ್ಲಿ ಎರಡು ಪದಗಳಿವೆ.

ದಿಗಂಬರ : ದಾರುಕಾವನದಲ್ಲಿ ಮುನಿಸ್ತ್ರೀಯರ ಪರೀಕ್ಷೆಗಾಗಿ ಧರಿಸಿದ ಸಮ್ಮೋಹಕಮೂರ್ತಿಯ ಹೆಸರಿದು.

**ಅಷ್ಟಮೂರ್ತಿರನೇಕಾತ್ಮಾ ಸಾತ್ತ್ವಿಕಃ ಶುದ್ಧವಿಗ್ರಹಃ ।**
**ಶಾಶ್ವತಃ ಖಣ್ಡಪರಶುರಜಃ ಪಾಶವಿಮೋಚಕಃ ॥೧೧॥**

## ವಿವರಣೆ

ಅಷ್ಟಮೂರ್ತಿ : ಪಂಚಭೂತಗಳು, ಚಂದ್ರಸೂರ್ಯರು, ಆತ್ಮ- ಎಂಬ ಎಂಟು ಶರೀರಗಳುಳ್ಳಾತನಾದ್ದರಿಂದ ಶಿವನು ಅಷ್ಟಮೂರ್ತಿ. ಪೃಥಿವ್ಯಾದ್ಯಭಿಮಾನಿಗಳಾದ ಶರ್ವನೇ ಮುಂತಾದ ಮೂರ್ತಿಗಳನ್ನು ಈ ಅಷ್ಟೋತ್ತರದಲ್ಲಿ ಬೇರೆಬೇರೆಯಾಗಿ ಹೇಳಿಯೇಇರುತ್ತದೆ. ಆದ್ದರಿಂದ ಇಲ್ಲಿ ಅಷ್ಟಮೂರ್ತಿ ಎಂಬ ಹೆಸರಿನಿಂದ ವಿಶ್ವಂಭರನೆಂಬ ಸಮಷ್ಟ್ಯಭಿಮಾನಿದೇವತೆಯನ್ನು ಹೇಳಿರುತ್ತದೆ ಎಂದರಿಯಬೇಕು.

ಅನೇಕಾತ್ಮ : ಅನೇಕವಾದ ಶರೀರವುಳ್ಳವನು, ಪ್ರಪಂಚರೂಪವಾಗಿರುವಾತನು ಎಂದರ್ಥ. ಯಾವಯಾವ ಪದಾರ್ಥಕ್ಕೆ ಯಾವಯಾವ ಶಕ್ತಿಯಿರುವದೋ ಆ ಶಕ್ತಿಯೆಲ್ಲವೂ ದೇವಿಯೇ. ಆ ಪದಾರ್ಥವೆಲ್ಲವೂ ಪರಮೇಶ್ವರನೇ- ಎಂದು ಪುರಾಣಗಳಲ್ಲಿ ವರ್ಣಿತವಾಗಿರುತ್ತದೆ.

ಸಾತ್ತ್ವಿಕ : ಸಂಹಾರಕರುದ್ರನಿಗೆ ಮಾಯೆಯಲ್ಲಿರುವ ಸತ್ತ್ವವು ಶರೀರವಾಗಿರುತ್ತದೆ. ರುದ್ರನು ತಮೋಗುಣೋಪಾಧಿಕನೆಂದು ಪ್ರಸಿದ್ಧಿಯಿದೆಯಷ್ಟೆ. ಸಂಹಾರದಲ್ಲಿ ತಮೋಗುಣವನ್ನು ಉಪಕರಣವಾಗಿ ಉಪಯೋಗಿಸಿಕೊಳ್ಳುತ್ತಾನೆಂದು ಅದಕ್ಕೆ ಅರ್ಥ. ಅಥವಾ ಸಾತ್ತ್ವಿಕನೆಂದರೆ ಸತ್ತ್ವಗುಣವನ್ನು ಪ್ರವರ್ತಿಸುವಂತೆ ಮಾಡುವವನು ಎಂದರ್ಥ.

ಶುದ್ಧವಿಗ್ರಹ : ಶುದ್ಧವಾದ ಎಂದರೆ ನಿರ್ದುಷ್ಟವಾದ ರೂಪವುಳ್ಳಾತನು. ಅಪ್ರಾಕೃತವಾದ ಸಚ್ಚಿದಾನಂದವಿಗ್ರಹನೆಂದರ್ಥ.

**ಶಾಶ್ವತ :** ಯಾವಾಗಲೂ ಇರುವಾತನು.

**ಖಂಡಪರಶು :** ಗಜಾಸುರನನ್ನು ಕೊಲ್ಲುವಾಗ ಈತನ ಪರಶುಗಳು ತುಂಡಾದವು. ಆ ಖಂಡಪರಶುಗಳನ್ನೇ ಧರಿಸಿರುವಾತನು, ದುಷ್ಟಶಿಕ್ಷಣವನ್ನು ಮಾಡಿದ್ದರ ಗುರುತು.

**ಅಜ :** ಜನ್ಮರಹಿತನು. ಯಾವ ವಿಕಾರವೂ ಇಲ್ಲದವನು ಎಂದು ಅಭಿಪ್ರಾಯ.

**ಪಾಶವಿಮೋಚಕ :** ಪಾಶವೆಂದರೆ ಸಂಸಾರವು. ಪಶುರೂಪರಾದ ಜೀವರು ಸಂಸಾರಬದ್ಧರಾಗಿರುತ್ತಾರೆ. ಅವರನ್ನು ಬಿಡುಗಡೆಮಾಡುವದರಿಂದ ಪಶುಪತಿಯಾದ ಶಿವನು ಪಾಶವಿಮೋಚಕನೆನಿಸಿರುತ್ತಾನೆ. ಅವಿದ್ಯಾಕಾರ್ಯ-ವಾದ ಮನೋಬುದ್ಧ್ಯಹಂಕಾರಗಳು, ಪಂಚತನ್ಮಾತ್ರೆಗಳು, ಭೂತಗಳು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು—ಎಂಬ ಮೂವತ್ತೆರಡು: ಅಥವಾ ದಶೇಂದ್ರಿಯಗಳು ; ಅಥವಾ ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ —ಎಂಬ ಕ್ಲೇಶಗಳು; ಮೂರು ಗುಣಗಳು. ಕರ್ತೃತ್ವಭೋಕ್ತೃತ್ವಾಭಿಮಾನ— ಇವೆಲ್ಲವನ್ನೂ ಪಾಶಗಳೆಂದೇ ಕರೆಯುತ್ತಾರೆ. ಎಲ್ಲಾ ಬಗೆಯಿಂದಲೂ ಬಿಡುಗಡೆಯನ್ನುಂಟುಮಾಡುವದರಿಂದ ಶಿವನಿಗೆ ಪಾಶವಿಮೋಚಕನೆಂದು ಹೆಸರು. ಇಲ್ಲಿಗೆ ತೊಂಬತ್ತು ನಾಮಗಳಾದವು.

**ಮೃಡಃ ಪಶುಪತಿರ್ದೇವೋ ಮಹಾದೇವೋಽವ್ಯಯೋ ಹರಿಃ ।**
**ಪೂಷದನ್ತಭಿದವ್ಯಗ್ರೋ ದಕ್ಷಾಧ್ವರಹರೋ ಹರಃ ॥೧೨॥**

## ವಿವರಣೆ

**ಮೃಡ**ನೆಂದರೆ ಸುಖವನ್ನುಂಟುಮಾಡುವವನು.

**ಪಶುಪತಿ :** ಪಶುಗಳೆಂದರೆ ಜೀವರು. ಅವರ ಬಂಧಮೋಕ್ಷಗಳಿಗೆ ಒಡೆಯನಾದ್ದರಿಂದ ಶಿವನಿಗೆ ಪಶುಪತಿಯೆಂದು ಹೆಸರು.

**ದೇವ :** ದೇವನೆಂದರೆ ಜಗತ್ತನ್ನು ಸೃಷ್ಟಿಸುವದೇ ಮುಂತಾದ ಕ್ರೀಡೆಯಲ್ಲಿ ರತನಾದವನು. ಅಥವಾ ಎಲ್ಲರಿಗೂ ಒಡೆಯನು.

**ಮಹಾದೇವ :** ಸಕಲರಿಗೂ ಪೂಜ್ಯನಾಗಿ ಸರ್ವವ್ಯಾಪಕನಾಗಿಯೂ ಇರುವ ದೇವನು. ಚಂದ್ರಾಭಿಮಾನಿಯಾದ ದೇವತೆಗೆ ಮಹಾದೇವನೆಂಬ ಹೆಸರು ಇದೆ.

**ಅವ್ಯಯ :** ವ್ಯಯನಾಗದವನು. ಅಥವಾ ಜ್ಞಾನವೇ ಮುಂತಾದ ಹತ್ತು ಅವ್ಯಯಗುಣಗಳುಳ್ಳವನು.

**ಹರಿ :** ಪಾಪಗಳನ್ನು ತೊಲಗಿಸುವವನಾದ್ದರಿಂದ ಶಿವನು ಹರಿಯೆನಿಸುತ್ತಾನೆ. ನಿನ್ನ ನಾಮಗಳೆಲ್ಲವೂ ನನ್ನ ನಾಮಗಳು ಎಂದು ಹರಿವಂಶದಲ್ಲಿ ಶಿವನು ವಿಷ್ಣುವಿಗೆ ಹೇಳಿರುತ್ತಾನೆ. ಆದ್ದರಿಂದಲೂ ಈ ನಾಮವು ಶಿವನಿಗೆ ಒಪ್ಪುತ್ತದೆ.

**ಪೂಷದಂತಭಿದ್ :** ದಕ್ಷಯಜ್ಞದಲ್ಲಿ ವೀರಭದ್ರನು ಪೂಷನ ಹಲ್ಲುಗಳನ್ನು ಮುರಿದುಹಾಕಿದನೆಂದೂ ಅಂದಿನಿಂದ ಅವನಿಗೆ ಸ್ಪಷ್ಟವಾಗಿ ಮಾತನಾಡುವದಾಗಲಿಲ್ಲವೆಂದೂ ಪುರಾಣಪ್ರಸಿದ್ಧಿ.

**ಅವ್ಯಗ್ರ :** ಚಿತ್ತವು ಸ್ವಲ್ಪವೂ ಕದಲದವನು. ಈ ನಾಮವು ದಕ್ಷಯಜ್ಞದ ಭಂಗವನ್ನು ಮಾಡುವದೇ ಮುಂತಾದ ಕಾರ್ಯಗಳಲ್ಲಿ ತೊಡಗಿದರೂ ಕೋಪಾದಿಪರವಶನಾಗಿ ಚಿತ್ತವ್ಯಗ್ರತೆಯನ್ನು ಪಡೆಯಲಿಲ್ಲವೆಂಬ ಮಹಿಮೆಯನ್ನು ಸೂಚಿಸುತ್ತದೆ. ಶಿವದ್ರೋಹಿಗಳಿಗೆ ಅನುಗ್ರಹವನ್ನು ಮಾಡುವದಕ್ಕೆ ಅವರವರಿಗೆ ತಕ್ಕ ದಂಡವನ್ನು ವಿಧಿಸಿದರೂ ಈತನು ಕೋಪಾಂಧನಲ್ಲವೆಂದು ಭಾವ.

**ದಕ್ಷಾಧ್ವರಹರ :** ದಕ್ಷಯಜ್ಞವನ್ನು ನಾಶಗೊಳಿಸಿದವನು.

**ಹರ :** ಸರ್ವವನ್ನೂ ಸಂಹಾರಮಾಡುವಾತನು. ಸೃಷ್ಟಿಸ್ಥಿತಿಸಂಹಾರಗಳನ್ನು ಮಾಡುವ ರುದ್ರಮೂರ್ತಿಯೆಂಬ ಮೂರನೆಯ ಮೂರ್ತಿಯ ಹೆಸರಿದು. ಈ ನಾಮಕ್ಕೆ ಆಗಮಗಳಲ್ಲಿ ಬಹಳ ಪ್ರಾಶಸ್ತ್ಯವುಂಟು. ಎಂಟುಸಲ 'ಹರಹರ' ಎಂದು ನೀರಿನಲ್ಲಿ ಮುಳುಗಿ ಜಪಿಸಿದಮಾತ್ರದಿಂದ ಸರ್ವಪಾಪಗಳೂ ತೊಲಗುವವೆಂದು ಅಲ್ಲಿ ಹೇಳಿದೆ. ಇದು ನೂರನೆಯ ನಾಮವು.

ಭಗನೇತ್ರಭಿದವ್ಯಕ್ತಃ ಸಹಸ್ರಾಕ್ಷಃ ಸಹಸ್ರಪಾತ್ ।
ಅಪವರ್ಗಪ್ರದೋಽನನ್ತಸ್ತಾರಕಃ ಪರಮೇಶ್ವರಃ ॥೧೩॥

## ವಿವರಣೆ

**ಭಗನೇತ್ರಭಿದ್ :** ಭಗನೆಂಬ ದೇವತೆಯ ಕಣ್ಣುಗಳನ್ನು ದಕ್ಷಾಧ್ವರದಲ್ಲಿ ಕೀಳಿಸಿದನೆಂದು ಪುರಾಣಪ್ರಸಿದ್ಧಿ.

**ಅವ್ಯಕ್ತ :** ವ್ಯಕ್ತನಲ್ಲದವನು. ಅತ್ಯಂತಸೂಕ್ಷ್ಮನಾಗಿರುವದರಿಂದ ಇಂದ್ರಿಯಗಳಿಗೆ ಗೋಚರನಲ್ಲವೆಂದರ್ಥ.

**ಸಹಸ್ರಾಕ್ಷ :** ಸಾವಿರಾರು ಕಣ್ಣುಗಳುಳ್ಳವನು. ಎಲ್ಲರ ಕಣ್ಣುಗಳೂ ಆತನ ಕಣ್ಣುಗಳೇ ಎಂದರ್ಥ.

**ಸಹಸ್ರಪಾತ್ :** ಸಾವಿರಾರು ಕಾಲುಗಳುಳ್ಳವನು. ಇದೂ ವಿಶ್ವರೂಪನಾದ ಶಿವನ ಹೆಸರೇ.

**ಅಪವರ್ಗಪ್ರದ :** ಮೋಕ್ಷವನ್ನು ಕೊಡುವಾತನು. ಆಕಾಶವನ್ನು ಚರ್ಮದ ಸುರುಳಿಯಂತೆ ಸುತ್ತಿದರೂ ಸುತ್ತಬಹುದು, ಪರಮೇಶ್ವರನ ಜ್ಞಾನವಿಲ್ಲದೆ ಮೋಕ್ಷವು ಮಾತ್ರ ಆಗದು-ಎಂದು ಶ್ರುತಿಯಲ್ಲಿರುತ್ತದೆ.

**ಅನಂತ :** ಅಂತವೆಂದರೆ ಪರಿಚ್ಛೇದವು ; ದೇಶ, ಕಾಲ, ವಸ್ತು-ಇವುಗಳಿಂದಾದ ಯಾವ ಎಲ್ಲೆಕಟ್ಟೂ ಇಲ್ಲದವನು ಅನಂತನು ಎಂದರ್ಥ.

**ತಾರಕ :** ಸಂಸಾರದಿಂದ ದಾಟಿಸುವವನು. ಅಥವಾ ತಾರವೆಂದರೆ ಪ್ರಣವವು. ಓಂಕಾರವನ್ನುಪದೇಶಿಸಿ ಜೀವರನ್ನು ಮೋಕ್ಷಕ್ಕೆ ಅರ್ಹರನ್ನಾಗಿ ಮಾಡುವದರಿಂದ ಶಿವನಿಗೆ ತಾರಕನೆಂದು ಹೆಸರು.

**ಪರಮೇಶ್ವರ :** ಸರ್ವಕರ್ಮಗಳಿಗೂ ಸ್ವತಂತ್ರನಾಗಿ ಫಲವನ್ನು ಕೊಡುವದರಿಂದ ಇವನು ಪರಮೇಶ್ವರನೆನಿಸಿರುತ್ತಾನೆ. ಬೇರೆಬೇರೆಯ ದೇವರುಗಳನ್ನು ಆರಾಧಿಸಿದರೂ ಶಿವನೇ ಸುಪ್ರೀತನಾಗಿ ಫಲವನ್ನು ಕೊಡುತ್ತಾನೆ.

**ಏತದಷ್ಟೋತ್ತರಂ ನಾಮ್ನಾಂ ಶತಮಾಮ್ನಾಯಸಮ್ಮಿತಮ್ ।**
**ಶಙ್ಕರಸ್ಯ ಪ್ರಿಯಾ ಗೌರೀ ಜಪ್ತ್ವಾ ಶಮ್ಭುಪ್ರಸಾದದಮ್ ॥೧೪॥**
**ತ್ರೈಕಾಲ್ಯಮನ್ವಹಂ ದೇವೀ ವರ್ಷಮೇಕಂ ಪ್ರಯತ್ನತಃ ।**
**ಅವಾಪ ಸಾ ಶರೀರಾರ್ಧಂ ಪ್ರಸಾದಾಚ್ಛೂಲಪಾಣಿನಃ ॥೧೫॥**

೧೪-೧೫. ಶಂಭುವಿನ ಪ್ರಸಾದವನ್ನು ಕೊಡುವ ವೇದಸಮಾನವಾದ ಈ ಅಷ್ಟೋತ್ತರಶತನಾಮಗಳನ್ನು ಶಂಕರನ ಪ್ರಿಯಳಾದ ಗೌರೀದೇವಿಯು ಪ್ರತಿದಿನವೂ ಮೂರು ಹೊತ್ತು ಒಂದು ವರ್ಷದವರೆಗೆ ಪ್ರಯತ್ನಪೂರ್ವಕವಾಗಿ ಜಪಿಸಿ ಶೂಲಪಾಣಿಯ ಅನುಗ್ರಹದಿಂದ ಆತನ ಶರೀರಾರ್ಧವನ್ನು ಪಡೆದುಕೊಂಡಳು.

## ವಿವರಣೆ

ಈ ಶಿವನಾಮಾಷ್ಟೋತ್ತರಶತಕಸ್ತೋತ್ರವು ವೇದಸಮಾನವಾದದ್ದು ಅಥವಾ ಇದರಲ್ಲಿರುವ ನಾಮಗಳಲ್ಲಿ ಬಹುಮಟ್ಟಿಗೆ ಎಲ್ಲವೂ ವೇದದಲ್ಲಿಯೇ ಕಂಡುಬರುವದರಿಂದ ವೇದೋಕ್ತವಾದದ್ದು. ಈ ಸ್ತೋತ್ರವನ್ನು ಶಂಕರನ ಪತ್ನಿಯಾದ ಗೌರಿಯು ಒಂದು ವರ್ಷದವರೆಗೆ ಪ್ರತಿದಿನವೂ ಮೂರುಹೊತ್ತು ಜಪಿಸಿದಳು. ಆಗ ಶಮದಮಾದಿಸಾಧನಗಳಿಂದ ಕೂಡಿ ಪ್ರಯತ್ನಪೂರ್ವಕ ವಾಗಿ ಶಿವಚಿಂತನೆಯನ್ನು ಮಾಡುತ್ತಿದ್ದಳು. ಆದರ ಫಲವಾಗಿ ಆಕೆಗೆ ಶಿವನ ಅರ್ಧಾಂಗವೇ ದೊರೆಯಿತು.

**ಯಸ್ತ್ರಿಸನ್ಧ್ಯಂ ಪಠೇನ್ನಿತ್ಯಂ ನಾಮ್ನಾಮಷ್ಟೋತ್ತರಂ ಶತಮ್ ।**
**ಶತರುದ್ರತ್ರಿರಾವೃತ್ತ್ಯಾ ಯತ್ ಫಲಂ ಲಭತೇ ನರಃ ॥೧೬॥**
**ತತ್ ಫಲಂ ಪ್ರಾಪ್ನುಯಾನ್ನಿತ್ಯಮೇಕಾವೃತ್ತ್ಯಾ ನ ಸಂಶಯಃ ।**

೧೬. ಯಾ ವಾ ತ ನು ಮೂರುಹೊತ್ತಿನಲ್ಲಿಯೂ ಈ ಅಷ್ಟೋತ್ತರಶತನಾಮಸ್ತೋತ್ರವನ್ನು ಪಠಿಸುವನೋ ಅವನಿಗೆ ಶತ ರುದ್ರವನ್ನು ಮೂರಾವೃತ್ತಿ ಹೇಳಿದ ಫಲವು ಇದನ್ನು ನಿತ್ಯವೂ ಒಂದುಸಲ ಹೇಳಿಕೊಳ್ಳುವದರಿಂದಲೇ ಲಭಿಸುವದು.

## ವಿವರಣೆ

ಶತರುದ್ರವೆಂಬುದು **'ನಮಸ್ತೇ ರುದ್ರ ಮನ್ಯವೇ'** ಎಂದು ಮೊದ ಲಾಗಿರುವ ಅನುವಾಕಸಮೂಹವು. ಆದರಲ್ಲಿ ನೂರಕ್ಕಿಂತ ಹೆಚ್ಚಾಗಿಯೇ ರುದ್ರರನ್ನು ಹೇಳಿದೆಯಾದರೂ ನೂರರಮೇಲೆ ಮತ್ತೊಂದು ನೂರಿಲ್ಲವೆಂಬ ಅಭಿಪ್ರಾಯದಿಂದ ಅದನ್ನು ಶತರುದ್ರವೆಂದೇ ಕರೆಯುತ್ತಾರೆ. ಶತರುದ್ರ ವನ್ನು ಒಂದುಸಲ ಭಕ್ತಿಯಿಂದ ಹೇಳಿದರೂ ಹೆಚ್ಚಿನ ಫಲವುಂಟು ; ಅದನ್ನು ಮೂರುಸಲ ಹೇಳಿದಷ್ಟು ಫಲವು ಈ ಸ್ತೋತ್ರದಿಂದ ಲಭಿಸುವದೆಂದು ಹೇಳಿದ್ದು ಇದರ ಪ್ರಶಂಸೆಯೆಂದು ತಿಳಿಯಬೇಕು. ಶತರುದ್ರವೆಂಬುದು ವೈದಿಕಮಂತ್ರ ವಾಗಿರುವಲ್ಲಿ ಈ ಪೌರಾಣಿಕಶ್ಲೋಕಗಳ ಪಠನೆಯಿಂದಲೇ ಆದರ ಪಠನೆಯ ಫಲವು ದೊರೆಯುವದು ಹೇಗೆ ?– ಎಂದು ಶಂಕಿಸಬಾರದು. ಆಗಮಿಕರ

ದೃಷ್ಟಿಯಿಂದ ನೋಡಿದರೆ ಶತರುದ್ರರ ನಾಮಗಳು ಸಂಹಾರರುದ್ರವ್ಯೂಹಕ್ಕೆ ಸೇರಿರುವ ಹಿರಣ್ಯಬಾಹು, ಸೇನಾನಿ- ಮುಂತಾದವುಗಳಾಗಿವೆ; ಆದರೆ ಈ ಸ್ತೋತ್ರದಲ್ಲಿ ಮಹೇಶ್ವರಾದಿವ್ಯೂಹಕ್ಕೆ ಸೇರಿದ ಶಿವಭವಹರಾದಿನಾಮಗಳಿವೆ. ಇದೂ ಇಲ್ಲದೆ ಸ್ತೋತ್ರಪಾಠದಲ್ಲಿರುವ ಮಹತ್ತ್ವವು ಪುರಾಣ ಅಥವಾ ವೇದ- ಎಂಬ ತಾರತಮ್ಯದ ಮೇಲೆ ನಿಂತಿರುವದಿಲ್ಲ. ಭಗವಂತನ ನಾಮವು ಆತನ ಗುಣಕರ್ಮಗಳ ಮಹಿಮೆಯನ್ನು ಕೊಂಡಾಡುತ್ತದೆ; ಆತನ ಸ್ವರೂಪವನ್ನು ತಿಳಿಯುವದಕ್ಕೂ ಪರಂಪರೆಯು ಸಾಧನವಾಗಿರುತ್ತದೆ. ಆದ್ದರಿಂದ ನಾಮದಲ್ಲಿ ಅರ್ಥವಿಶೇಷವನ್ನು ಅನುಸಂಧಾನಮಾಡಿದವರು ಭಗವಂತನಲ್ಲಿಯೇ ನಿಷ್ಠೆ ಯನ್ನು ಪಡೆಯುತ್ತಾರಾದ್ದರಿಂದ ಅವರಿಗೆ ಸತ್ತ್ವಶುದ್ಧಿ, ಭಕ್ತಿ, ಜ್ಞಾನ, ವೈರಾಗ್ಯಗಳು ಹೆಚ್ಚುತ್ತಾ ಹೋಗುವವು, ಸಾತ್ತ್ವಿಕರಾದ ಭಗವದ್ಭಕ್ತರಿಗೆ ಐಹಿಕವಾದ ಇಷ್ಟಾರ್ಥಗಳು ನೆರವೇರುವದೆಂಬುದಂತೂ ತೀರಕಡಿಮೆಯ ಫಲ ವಾಗಿರುತ್ತದೆ. ಆದರೆ ಯಾವ ಫಲಕ್ಕಾದರೂ ಎಡೆಬಿಡದೆ ಇಂದ್ರಿಯಸಂಯಮ ದಿಂದಲೂ ಶ್ರದ್ಧೆಯಿಂದಲೂ ಸ್ತೋತ್ರವನ್ನು ಪಠನೆಮಾಡುವದು ಅತ್ಯವಶ್ಯ ವಾಗಿರುತ್ತದೆ. ಈ ಅಭಿಪ್ರಾಯವು 'ಪ್ರಯತ್ನತಃ', 'ನಿತ್ಯಮ್'- ಎಂಬ ವಿಶೇಷಣಗಳಿಂದ ಸೂಚಿತವಾಗಿರುತ್ತದೆ. ಇದೂ ಅಲ್ಲದೆ ಈ ನಾಮಗಳು ವೇದದಿಂದಲೇ ಆರಿಸಿ ಸೇರಿಸಿಟ್ಟವುಗಳಾಗಿವೆಯೆಂದು ಹಿಂದೆಯೇ ಹೇಳಿರು ತ್ತೇವೆ. ಆ ಕಾರಣದಿಂದ ವೇದಸಾರವಾಗಿರುವ ಈ ನಾಮಾಷ್ಟೋತ್ತರಶತ ವನ್ನು ಭಕ್ತಿಯಿಂದ ಜಪಿಸುವವರಿಗೆ ಕ್ರಮಕ್ರಮವಾಗಿ ಮುಕ್ತಿಯುಕೂಡ ವಶವಾಗುತ್ತದೆ; ಹೀಗಿರುವಲ್ಲಿ ಶತರುದ್ರದ ಜಪದಿಂದಾಗುವ ಫಲವುಂಟಾಗು ತ್ತದೆ ಎಂಬುದರಲ್ಲಿ ಸಂಶಯವೇನು ?

ಶತರುದ್ರವನ್ನು ಮೂರುಸಲ ಹೇಳಿಕೊಳ್ಳುವದರಿಂದಾಗುವ ಫಲವು ಈ ಸ್ತೋತ್ರವನ್ನು ಒಂದುಸಲ ಹೇಳಿಕೊಂಡಮಾತ್ರದಿಂದ ದೊರೆಯುತ್ತದೆ ಎಂದು ಹೇಳಿರುವದು ಅರ್ಥವಾದವು. ಈ ಹೊಗಳಿಕೆಯಲ್ಲಿ ಶತರುದ್ರಪಾಠವು ಕಡಿಮೆಯ ಫಲವುಳ್ಳದ್ದು ಎಂಬರ್ಥವೇನೂ ಇಲ್ಲ; ಏಕೆಂದರೆ ಇದು ಈ ಸ್ತೋತ್ರದ ಫಲವನ್ನು ಹೊಗಳುವದಕ್ಕಾಗಿಯೇ ಬಂದಿರುತ್ತದೆ. ಶತರುದ್ರವು ವೇದಮಂತ್ರವಾಗಿರುವದರಿಂದ ಅದನ್ನು ಪಠಿಸುವದಕ್ಕೆ ಎಲ್ಲರಿಗೂ ಅಧಿಕಾರ ವಿಲ್ಲ; ಯೋಗ್ಯತೆ ಇದ್ದವರೂ ಸ್ವರವರ್ಣಲೋಪವಿಲ್ಲದೆ ಅದನ್ನು ಉಚ್ಚಾರಣೆ

ಮಾಡುವದು ಸುಲಭವಲ್ಲ. ಆದ್ದರಿಂದ ಕ್ಲಿಷ್ಟವಾದ ಶತರುದ್ರಜಪಕ್ಕಿಂತಲೂ ಸುಲಭವಾಗಿರುವ ಈ ಸ್ತೋತ್ರಜಪವು ನಾಮಾರ್ಥದ ಅನುಸಂಧಾನಮಾತ್ರದಿಂದ ಕ್ಷಿಪ್ರಫಲವನ್ನು ಕೊಡುತ್ತದೆ-ಎಂಬುದರಲ್ಲಿಯೇ ಈ ವಾಕ್ಯಕ್ಕೆ ತಾತ್ಪರ್ಯವನ್ನು ಕಲ್ಪಿಸಬೇಕು.

**ಸಕೃದ್ವಾ ನಾಮಭಿಃ ಪೂಜ್ಯ ಕುಲಕೋಟಿಂ ಸಮುದ್ಧರೇತ್ ॥೧೭॥**

೧೭. ಒಂದು ಸಲ ಈ ನಾಮಗಳಿಂದ ಪೂಜಿಸಿದರೂ ಕುಲಕೋಟಿಯನ್ನು ಉದ್ಧಾರಮಾಡಿದವನಾಗುವನು.

ಈಶ್ವರನಲ್ಲಿ ಭಕ್ತಿಯನ್ನಿಟ್ಟವರಿಗೆ ಆದರಿಂದಾಗುವ ಫಲವು ಅವರಿಗೆ ಮಾತ್ರ ಲಭಿಸುವದಿಲ್ಲ; ಅವರ ಕುಲದವರಿಗೂ ಅದರಿಂದ ಫಲವುಂಟು. ಶಿವನನ್ನು ಈ ಅಷ್ಟೋತ್ತರಶತನಾಮಾವಳಿಯಿಂದ ಪೂಜಿಸುವವರ ವಂಶದಲ್ಲಿ ಮುಂದೆ ಹುಟ್ಟುವವರ.ಕೂಡ ಪಾಪರಹಿತರಾಗುತ್ತಾರೆ.

**ಬಿಲ್ವಪತ್ರೈಃ ಪ್ರಶಸ್ತೈಶ್ಚ ಪುಷ್ಪೈಶ್ಚ ತುಲಸೀದಲೈಃ ।**
**ತಿಲಾಕ್ಷತೈರ್ಯಜೇದ್ಯಸ್ತು ಜೀವನ್ಮುಕ್ತೋ ನ ಸಂಶಯಃ ॥೧೮॥**

೧೮. ಪ್ರಶಸ್ತವಾದ ಬಿಲ್ವಪತ್ರಗಳಿಂದಲೂ ಹೂಗಳಿಂದಲೂ ತುಲಸೀದಲಗಳಿಂದಲೂ ತಿಲಾಕ್ಷತೆಯಿಂದಲೂ ಯಾವನು ಪೂಜಿಸುವನೋ ಅವನು ಜೀವನ್ಮುಕ್ತನು, ಸಂಶಯವಿಲ್ಲ.

ಪರಮೇಶ್ವರನನ್ನು ಭಕ್ತಿಯಿಂದ ಅರ್ಚಿಸುವದಕ್ಕೆ ಈ ನಾಮಗಳನ್ನು ವಿನಿಯೋಗಿಸಿದರೆ ಮನೋವಾಕ್ಕಾಯಗಳೆಲ್ಲವನ್ನೂ ಶಿವಭಕ್ತಿಯಲ್ಲಿಯೇ ನಿಲ್ಲಿಸಿದಂತಾಗುವದರಿಂದ ಕ್ಷಿಪ್ರವಾಗಿಯೇ ವೈರಾಗ್ಯಾದಿಗಳೂ ಜ್ಞಾನಯೋಗ್ಯತೆಯೂ ದೊರೆತು ಜ್ಞಾನನಿಷ್ಠೆಯಿಂದ ಜೀವನ್ಮುಕ್ತನಾಗುವನೆಂಬುದರಲ್ಲಿ ಸಂಶಯವಿಲ್ಲ. ಸಾತ್ತ್ವಿಕಭಕ್ತಿಮಾರ್ಗದಲ್ಲಿ ಕಾಲಿಟ್ಟವನು ಪಾಪದಿಂದ ಬಿಡುಗಡೆಹೊಂದಿ ಸಾಧನವಿಶೇಷಗಳಿಂದ ಕೂಡಿ ಕ್ರಮಕ್ರಮವಾಗಿ ಜೀವನ್ಮುಕ್ತನೇ ಆಗುತ್ತಾನೆಂಬುದು ಶಾಸ್ತ್ರಸಿದ್ಧವಾಗಿದೆ, ಬಲ್ಲವರ ಅನುಭವದಲ್ಲಿದೆ, ಯುಕ್ತಿಗೂ ಒಪ್ಪಾಗಿದೆ.

ಈ ಸ್ತೋತ್ರದಲ್ಲಿ ಉಪನಿಷತ್ತುಗಳಲ್ಲಿಯೂ ಸ್ಮೃತಿಗಳಲ್ಲಿಯೂ ಪುರಾಣಗಳಲ್ಲಿಯೂ ಪ್ರಸಿದ್ಧವಾಗಿರುವ ಅನೇಕ ರಹಸ್ಯನಾಮಗಳಿರುವದರಿಂದ ಈ ಪುರಾಣಭಾಗಕ್ಕೆ "ಶಿವರಹಸ್ಯ"ವೆಂಬ ಹೆಸರು ಬಂದಿರುತ್ತದೆ. ಇಂಥ ರಹಸ್ಯನಾಮಗಳನ್ನು ಅರ್ಥಾನುಸಂಧಾನಪೂರ್ವಕವಾಗಿ ಪಠಿಸುವವರು ಜೀವನ್ಮುಕ್ತರೇ ಆಗುವವರೆಂಬುದರಲ್ಲಿ ಸಂಶಯವೇನು ?

|| ಶಿವಃ ಶರಣಮ್ ||

# ಶಿವನಾಮಾಷ್ಟೋತ್ತರಶತಕಮ್

( ಸಂಸ್ಕೃತಮೂಲ )

ಪಾರ್ವತ್ಯುವಾಚ :—

ಶರೀರಾರ್ಧಮಹಂ ಶಮ್ಭೋರ್ಯೇನ ಪ್ರಾಪ್ಸ್ಯಾಮಿ ಕೇಶವ |
ತದಿದಾನೀಂ ಮಮಾಚಕ್ಷ್ವ ಸ್ತೋತ್ರಂ ಶೀಘ್ರಫಲಪ್ರದಮ್ ||೧||

ನಾರಾಯಣ ಉವಾಚ :—

ಅಸ್ತಿ ಗುಹ್ಯತಮಂ ಗೌರಿ ನಾಮ್ನಾಮಷ್ಟೋತ್ತರಂ ಶತಮ್ |
ಶಮ್ಭೋರಹಂ ಪ್ರವಕ್ಷ್ಯಾಮಿ ಪಠತಾಂ ಶೀಘ್ರಕಾಮದಮ್ ||೨||

ಅಥ ಧ್ಯಾನಮ್ :—

ಧವಲವಪುಷಮಿನ್ದೋರ್ಮಣ್ಡಲೇ ಸನ್ನಿವಿಷ್ಟಂ
ಭುಜಗವಲಯಹಾರಂ ಭಸ್ಮದಿಗ್ಧಾಙ್ಗಮೀಶಮ್ |
ಹರಿಣಪರಶುಪಾಣಿಂ ಚಾರುಚನ್ದ್ರಾರ್ಧಮೌಲಿಂ
ಹೃದಯಕಮಲಮಧ್ಯೇ ಸನ್ತತಂ ಚಿನ್ತಯಾಮಿ ||೩||

ಶಿವೋ ಮಹೇಶ್ವರಃ ಶಮ್ಭುಃ ಪಿನಾಕೀ ಶಶಿಶೇಖರಃ |
ವಾಮದೇವೋ ವಿರೂಪಾಕ್ಷಃ ಕಪರ್ದೀ ನೀಲಲೋಹಿತಃ ||೪||
ಶಙ್ಕರಃ ಶೂಲಪಾಣಿಶ್ಚ ಖಟ್ವಾಙ್ಗೀ ವಿಷ್ಣುವಲ್ಲಭಃ |
ಶಿಪಿವಿಷ್ಟೋಽಮ್ಬಿಕಾನಾಥಃ ಶ್ರೀಕಣ್ಠೋ ಭಕ್ತವತ್ಸಲಃ
ಭವಃ ಶರ್ವಸ್ತ್ರಿಲೋಕೇಶಃ ಶಿತಿಕಣ್ಠಃ ಶಿವಾಪ್ರಿಯಃ |
ಉಗ್ರಃ ಕಪಾಲೀ ಕಾಮಾರಿರನ್ಧಕಾಸುರಸೂದನಃ ||೬||
ಗಙ್ಗಾಧರೋ ಲಲಾಟಾಕ್ಷಃ ಕಾಲಕಾಲಃ ಕೃಪಾನಿಧಿಃ |
ಭೀಮಃ ಪರಶುಹಸ್ತಶ್ಚ ಮೃಗಪಾಣಿರ್ಜಟಾಧರಃ ||೭||
ಕೈಲಾಸವಾಸೀ ಕವಚೀ ಕಠೋರಸ್ತ್ರಿಪುರಾನ್ತಕಃ |
ವೃಷಾಙ್ಕೋ ವೃಷಭಾರೂಢೋ ಭಸ್ಮೋದ್ಧೂಲಿತವಿಗ್ರಹಃ ||೮||
ಸಾಮಪ್ರಿಯಃ ಸ್ವರಮಯಸ್ತ್ರಯೀಮೂರ್ತಿರನೀಶ್ವರಃ |
ಸರ್ವಜ್ಞಃ ಪರಮಾತ್ಮಾ ಚ ಸೋಮಸೂರ್ಯಾಗ್ನಿಲೋಚನಃ

ಹವಿರ್ಯಜ್ಞಮಯಃ ಸೋಮಃ ಪಞ್ಚವಕ್ತ್ರಃ ಸದಾಶಿವಃ
ವಿಶ್ವೇಶ್ವರೋ ವೀರಭದ್ರೋ ಗಣನಾಥಃ ಪ್ರಜಾಪತಿಃ ॥೧೦॥
ಹಿರಣ್ಯರೇತಾ ದುರ್ಧರ್ಷೋ ಗಿರೀಶೋ ಗಿರಿಶೋಽನಘಃ ।
ಭುಜಙ್ಗಭೂಷಣೋ ಭರ್ಗೋ ಗಿರಿಧನ್ವಾ ಗಿರಿಪ್ರಿಯಃ ॥೧೧॥
ಕೃತ್ತಿವಾಸಾಃ ಪುರಾರಾತಿರ್ಭಗವಾನ್ ಪ್ರಮಥಾಧಿಪಃ ।
ಮೃತ್ಯುಞ್ಜಯಃ ಸೂಕ್ಷ್ಮತನುರ್ಜಗದ್ವ್ಯಾಪೀ ಜಗದ್ಗುರುಃ ॥೧೨॥
ವ್ಯೋಮಕೇಶೋ ಮಹಾಸೇನಜನಕಶ್ಚಾರುವಿಕ್ರಮಃ ।
ರುದ್ರೋ ಭೂತಪತಿಃ ಸ್ಥಾಣುರಹಿರ್ಬುಧ್ನ್ಯೋ ದಿಗಮ್ಬರಃ ॥೧೩॥
ಅಷ್ಟಮೂರ್ತಿರನೇಕಾತ್ಮಾ ಸಾತ್ತ್ವಿಕಃ ಶುದ್ಧವಿಗ್ರಹಃ ।
ಶಾಶ್ವತಃ ಖಣ್ಡಪರಶುರಜಃ ಪಾಶವಿಮೋಚಕಃ ॥೧೪॥
ಮೃಡಃ ಪಶುಪತಿರ್ದೇವೋ ಮಹಾದೇವೋಽವ್ಯಯೋ ಹರಿಃ ।
ಪೂಷದನ್ತಭಿದವ್ಯಗ್ರೋ ದಕ್ಷಾಧ್ವರಹರೋ ಹರಃ ॥೧೫॥
ಭಗನೇತ್ರಭಿದವ್ಯಕ್ತಃ ಸಹಸ್ರಾಕ್ಷಃ ಸಹಸ್ರಪಾತ್ ।
ಅಪವರ್ಗಪ್ರದೋಽನನ್ತಸ್ತಾರಕಃ ಪರಮೇಶ್ವರಃ ॥೧೬॥
ಏತದಷ್ಟೋತ್ತರಂ ನಾಮ್ನಾಂ ಶತಮಾಮ್ನಾಯಸಮ್ಮಿತಮ್ ।
ಶಙ್ಕರಸ್ಯ ಪ್ರಿಯಾ ಗೌರೀ ಜಪ್ತ್ವಾ ಶಮ್ಭುಪ್ರಸಾದದಮ್ ॥೧೭॥
ತ್ರೈಕಾಲ್ಯಮನ್ವಹಂ ದೇವೀ ವರ್ಷಮೇಕಂ ಪ್ರಯತ್ನತಃ ।
ಅವಾಪ ಸಾ ಶರೀರಾರ್ಧಂ ಪ್ರಸಾದಾಚ್ಛೂಲಪಾಣಿನಃ ॥೧೮॥
ಯಸ್ತ್ರಿಸನ್ಧ್ಯಂ ಪಠೇನ್ನಿತ್ಯಂ ನಾಮ್ನಾಮಷ್ಟೋತ್ತರಂ ಶತಮ್ ।
ಶತರುದ್ರತ್ರಿರಾವೃತ್ತ್ಯಾ ಯತ್ ಫಲಂ ಲಭತೇ ನರಃ ॥೧೯॥
ತತ್ಫಲಂ ಪ್ರಾಪ್ನುಯಾನ್ನಿತ್ಯಮೇಕಾವೃತ್ತ್ಯಾ ನ ಸಂಶಯಃ ।
ಸಕೃದ್ವಾ ನಾಮಭಿಃ ಪೂಜ್ಯ ಕುಲಕೋಟಿಂ ಸಮುದ್ಧರೇತ್ ॥೨೦॥
ಬಿಲ್ವಪತ್ರೈಃ ಪ್ರಶಸ್ತೈಶ್ಚ ಪುಷ್ಪೈಶ್ಚ ತುಲಸೀದಲೈಃ ।
ತಿಲಾಕ್ಷತೈರ್ಯಜೇದ್ಯಸ್ತು ಜೀವನ್ಮುಕ್ತೋ ನ ಸಂಶಯಃ ॥೨೧॥

ಇತಿ ಶ್ರೀ ಸ್ಕಾಂದಪುರಾಣೇ ಶಙ್ಕರಸಂಹಿತಾಯಾಂ ಶಿವರಹಸ್ಯಖಣ್ಡೇ
ಗೌರೀನಾರಾಯಣಸಂವಾದೇ ಶ್ರೀ ಶಿವನಾಮಾಷ್ಟೋತ್ತರಶತಸ್ತೋತ್ರಮ್

ಸಂಪೂರ್ಣಮ್

# ಅಥ ಶಿವನಾಮಾಷ್ಟೋತ್ತರಶತನಾಮಾವಳಿಃ

ಓಂ ಶಿವಾಯ ನಮಃ  
,, ಮಹೇಶ್ವರಾಯ ನಮಃ  
,, ಶಮ್ಭವೇ ನಮಃ  
,, ಪಿನಾಕಿನೇ ನಮಃ  
,, ಶಶಿಶೇಖರಾಯ ನಮಃ  
,, ವಾಮದೇವಾಯ ನಮಃ  
,, ವಿರೂಪಾಕ್ಷಾಯ ನಮಃ  
,, ಕಪರ್ದಿನೇ ನಮಃ  
,, ನೀಲಲೋಹಿತಾಯ ನಮಃ  
,, ಶಙ್ಕರಾಯ ನಮಃ ೧೦  
,, ಶೂಲಪಾಣಯೇ ನಮಃ  
,, ಖಟ್ವಾಙ್ಗಿನೇ ನಮಃ  
,, ವಿಷ್ಣುವಲ್ಲಭಾಯ ನಮಃ  
,, ಶಿಪಿವಿಷ್ಟಾಯ ನಮಃ  
,, ಅಮ್ಬಿಕಾನಾಥಾಯ ನಮಃ  
,, ಶ್ರೀಕಣ್ಠಾಯ ನಮಃ  
,, ಭಕ್ತವತ್ಸಲಾಯ ನಮಃ  
,, ಭವಾಯ ನಮಃ  
,, ಶರ್ವಾಯ ನಮಃ  
,, ತ್ರಿಲೋಕೇಶಾಯ ನಮಃ ೨೦  
,, ಶಿತಿಕಣ್ಠಾಯ ನಮಃ  
,, ಶಿವಾಪ್ರಿಯಾಯ ನಮಃ  
, ಉಗ್ರಾಯ ನಮಃ

ಓಂ ಕಪಾಲಿನೇ ನಮಃ  
,, ಕಾಮಾರಯೇ ನಮಃ  
,, ಅನ್ಧಕಾಸುರಸೂದನಾಯ ನಮಃ  
,, ಗಙ್ಗಾಧರಾಯ ನಮಃ  
,, ಲಲಾಟಾಕ್ಷಾಯ ನಮಃ  
,, ಕಾಲಕಾಲಾಯ ನಮಃ  
,, ಕೃಪಾನಿಧಯೇ ನಮಃ ೩೦  
,, ಭೀಮಾಯ ನಮಃ  
,, ಪರಶುಹಸ್ತಾಯ ನಮಃ  
,, ಮೃಗಪಾಣಯೇ ನಮಃ  
,, ಜಟಾಧರಾಯ ನಮಃ  
,, ಕೈಲಾಸವಾಸಿನೇ ನಮಃ  
,, ಕವಚಿನೇ ನಮಃ  
,, ಕಠೋರಾಯ ನಮಃ  
,, ತ್ರಿಪುರಾನ್ತಕಾಯ. ನಮಃ  
,, ವೃಷಾಙ್ಕಾಯ ನಮಃ  
,, ವೃಷಭಾರೂಢಾಯ ನಮಃ ೪೦  
,, ಭಸ್ಮೋದ್ಧೂಲಿತವಿಗ್ರಹಾಯ  
,, ಸಾಮಪ್ರಿಯಾಯ ನಮಃ  
,, ಸ್ವರಮಯಾಯ ನಮಃ  
,, ತ್ರಯೀಮೂರ್ತಯೇ ನಮಃ  
,, ಅನೀಶ್ವರಾಯ ನಮಃ  
,, ಸರ್ವಜ್ಞಾಯ ನಮಃ

ಓಂ ಪರಮಾತ್ಮನೇ ನಮಃ
,, ಸೋಮಸೂರ್ಯಾಗ್ನಿಲೋಚನಾಯ
,, ಹವಿಷೇ ನಮಃ
,, ಯಜ್ಞಮಯಾಯ ನಮಃ ೫೦
,, ಸೋಮಾಯ ನಮಃ
,, ಪಞ್ಚವಕ್ತ್ರಾಯ ನಮಃ
,, ಸದಾಶಿವಾಯ ನಮಃ
,, ವಿಶ್ವೇಶ್ವರಾಯ ನಮಃ
,, ವೀರಭದ್ರಾಯ ನಮಃ
,, ಗಣನಾಥಾಯ ನಮಃ
,, ಪ್ರಜಾಪತಯೇ ನಮಃ
,, ಹಿರಣ್ಯರೇತಸೇ ನಮಃ
,, ದುರ್ಧರ್ಷಾಯ ನಮಃ
,, ಗಿರೀಶಾಯ ನಮಃ ೬೦
,, ಗಿರಿಶಾಯ ನಮಃ
,, ಅನಘಾಯ ನಮಃ
,, ಭುಜಙ್ಗಭೂಷಣಾಯ ನಮಃ
,, ಭರ್ಗಾಯ ನಮಃ
,, ಗಿರಿಧನ್ವನೇ ನಮಃ
,, ಗಿರಿಪ್ರಿಯಾಯ ನಮಃ
,, ಕೃತ್ತಿವಾಸಸೇ ನಮಃ
,, ಪುರಾರಾತಯೇ ನಮಃ
,, ಭಗವತೇ ನಮಃ
,, ಪ್ರಮಥಾಧಿಪಾಯ ನಮಃ ೭೦
,, ಮೃತ್ಯುಂಜಯಾಯ ನಮಃ
,, ಸೂಕ್ಷ್ಮತನವೇ ನಮಃ
,, ಜಗದ್ವ್ಯಾಪಿನೇ ನಮಃ

ಓಂ ಜಗದ್ಗುರವೇ ನಮಃ
,, ವ್ಯೋಮಕೇಶಾಯ ನಮಃ
,, ಮಹಾಸೇನಜನಕಾಯ ನಮಃ
,, ಚಾರುವಿಕ್ರಮಾಯ ನಮಃ
,, ರುದ್ರಾಯ ನಮಃ
,, ಭೂತಪತಯೇ ನಮಃ
,, ಸ್ಥಾಣವೇ ನಮಃ ೮೦
,, ಅಹಯೇ ಬುಧ್ನ್ಯಾಯ ನಮಃ
,, ದಿಗಮ್ಬರಾಯ ನಮಃ
,, ಅಷ್ಟಮೂರ್ತಯೇ ನಮಃ
,, ಅನೇಕಾತ್ಮನೇ ನಮಃ
,, ಸಾತ್ತ್ವಿಕಾಯ ನಮಃ
,, ಶುದ್ಧವಿಗ್ರಹಾಯ ನಮಃ
,, ಶಾಶ್ವತಾಯ ನಮಃ
,, ಖಣ್ಡಪರಶವೇ ನಮಃ
,, ಅಜಾಯ ನಮಃ
,, ಪಾಶವಿಮೋಚಕಾಯ ನಮಃ ೯೦
,, ಮೃಡಾಯ ನಮಃ
,, ಪಶುಪತಯೇ ನಮಃ
,, ದೇವಾಯ ನಮಃ
,, ಮಹಾದೇವಾಯ ನಮಃ
,, ಅವ್ಯಯಾಯ ನಮಃ
,, ಹರಯೇ ನಮಃ
,, ಪೂಷದನ್ತಭಿದೇ ನಮಃ
,, ಅವ್ಯಗ್ರಾಯ ನಮಃ
,, ದಕ್ಷಾಧ್ವರಹರಾಯ ನಮಃ
,, ಹರಾಯ ನಮಃ ೧೦೦

ಓಂ ಭಗನೇತ್ರಭಿದೇ ನಮಃ
,, ಅವ್ಯಕ್ತಾಯ ನಮಃ
,, ಸಹಸ್ರಾಕ್ಷಾಯ ನಮಃ
,, ಸಹಸ್ರಪದೇ ನಮಃ

ಓಂ ಅಪವರ್ಗಪ್ರದಾಯ ನಮಃ
,, ಅನನ್ತಾಯ ನಮಃ
,, ತಾರಕಾಯ ನಮಃ
,, ಪರಮೇಶ್ವರಾಯ ನಮಃ ೧೦೮

ಇತಿ ಶ್ರೀ ಶಿವನಾಮಾಷ್ಟೋತ್ತರಶತನಾಮಾವಲಿಃ ಸಂಪೂರ್ಣಾ

# ನಾಮಗಳ ಅಕ್ಷರಾನುಕ್ರಮಣಿಕೆ

## ಸೂಚನೆ :- ಮೊದಲನೆಯದು ಶ್ಲೋಕಸಂಖ್ಯೆ, ಎರಡನೆಯದು ಪುಟಸಂಖ್ಯೆ


| | ಶ್ಲೋ. ಪು. | | ಶ್ಲೋ. ಪು. |
|---|---|---|---|
| ಅಜಃ | ೧೧-೨೭ | ಕೈಲಾಸವಾಸೀ | ೫-೧೭ |
| ಅನಘಃ | ೮-೨೩ | ಖಟ್ವಾಙ್ಗೀ | ೨-೧೦ |
| ಅನನ್ತಃ | ೧೩-೨೯ | ಖಣ್ಡಪರಶುಃ | ೧೧-೨೭ |
| ಅನೀಶ್ವರಃ | ೬-೧೯ | ಗಙ್ಗಾಧರಃ | ೪-೧೫ |
| ಅನೇಕಾತ್ಮಾ | ೧೧-೨೭ | ಗಣನಾಥಃ | ೭-೨೦ |
| ಅನ್ಧಕಾಸುರಸೂದನಃ | ೩-೧೨ | ಗಿರಿಧನ್ವಾ | ೮-೨೩ |
| ಅಪವರ್ಗಪ್ರದಃ | ೧೩-೨೯ | ಗಿರಿಪ್ರಿಯಃ | ೮-೨೩ |
| ಅಮ್ಬಿಕಾನಾಥಃ | ೨-೧೦ | ಗಿರಿಶಃ | ೮-೨೩ |
| ಅವ್ಯಕ್ತಃ | ೧೩-೨೯ | ಗಿರೀಶಃ | ೮-೨೩ |
| ಅವ್ಯಗ್ರಃ | ೧೨-೨೮ | ಚಾರುವಿಕ್ರಮಃ | ೧೦-೨೫ |
| ಅವ್ಯಯಃ | ೧೨-೨೮ | ಜಗದ್ಗುರುಃ | ೯-೨೪ |
| ಅಷ್ಟಮೂರ್ತಿಃ | ೧೧-೨೭ | ಜಗದ್ವ್ಯಾಪೀ | ೯-೨೪ |
| ಅಹಿರ್ಬುಧ್ನ್ಯಃ | ೧೦-೨೫ | ಜಟಾಧರಃ | ೪-೧೫ |
| ಉಗ್ರಃ | ೩-೧೨ | ತಾರಕಃ | ೧೩-೨೯ |
| ಕಠೋರಃ | ೫-೧೭ | ತ್ರಯೀಮೂರ್ತಿಃ | ೬-೧೯ |
| ಕಪರ್ದೀ | ೧-೫ | ತ್ರಿಪುರಾನ್ತಕಃ | ೫-೧೭ |
| ಕಪಾಲೀ | ೩-೧೨ | ತ್ರಿಲೋಕೇಶಃ | ೩-೧೨ |
| ಕವಚೀ | ೫-೧೭ | ದಕ್ಷಾಧ್ವರಹರಃ | ೧೨-೨೮ |
| ಕಾಮಾರಿಃ | ೩-೧೨ | ದಿಗಮ್ಬರಃ | ೧೦-೨೫ |
| ಕಾಲಕಾಲಃ | ೪-೧೫ | ದುರ್ಧರ್ಷಃ | ೮-೨೩ |
| ಕೃತ್ತಿವಾಸಾಃ | ೯-೨೪ | ದೇವಃ | ೧೨-೨೮ |
| ಕೃಪಾನಿಧಿಃ | ೪-೧೫ | ನೀಲಲೋಹಿತಃ | ೧-೫ |

| | ಶ್ಲೋ. ಪು. | | ಶ್ಲೋ. ಪು. |
|---|---|---|---|
| | ೭-೨೦ | ರುದ್ರಃ | ೧೦-೨೫ |
| ಪಞ್ಚವಕ್ತ್ರಃ | ೬-೧೯ | ಲಲಾಟಾಕ್ಷಃ | ೪-೧೫ |
| ಪರಮೇಶ್ವರಃ | ೧೩-೨೯ | ವಾಮದೇವಃ | ೧-೫ |
| ಪರಶುಹಸ್ತಃ | ೪-೧೫ | ವಿರೂಪಾಕ್ಷಃ | ೧-೫ |
| ಪಶುಪತಿಃ | ೧೨-೨೮ | ವಿಶ್ವೇಶ್ವರಃ | ೭-೨೦ |
| ಪಾಶವಿಮೋಚಕಃ | ೧೧-೨೭ | ವಿಷ್ಣುವಲ್ಲಭಃ | ೨-೧೦ |
| ಪಿನಾಕೀ | ೧-೫ | ವೀರಭದ್ರಃ | ೭-೨೦ |
| ಪುರಾರಾತಿಃ | ೯-೨೪ | ವೃಷಭಾರೂಢಃ | ೫-೧೭ |
| ಪೂಷದನ್ತಭಿತ್ | ೧೨-೨೮ | ವೃಷಾಙ್ಕಃ | ೫-೧೭ |
| ಪ್ರಜಾಪತಿಃ | ೭-೨೦ | ವ್ಯೋಮಕೇಶಃ | ೧೦-೨೫ |
| ಪ್ರಮಥಾಧಿಪಃ | ೯-೨೪ | ಶಙ್ಕರಃ | ೨-೧೦ |
| ಭಕ್ತವತ್ಸಲಃ | ೨-೧೦ | ಶಮ್ಭುಃ | ೧-೫ |
| ಭಗನೇತ್ರಭಿತ್ | ೧೩-೨೯ | ಶರ್ವಃ | ೩-೧೨ |
| ಭಗವಾನ್ | ೯-೨೪ | ಶಶಿಶೇಖರಃ | ೧-೫ |
| ಭರ್ಗಃ | ೮-೨೩ | ಶಾಶ್ವತಃ | ೧೧-೨೭ |
| ಭಸ್ಮೋದ್ಧೂಲಿತವಿಗ್ರಹಃ | ೫-೧೭ | ಶಿತಿಕಣ್ಠಃ | ೩-೧೨ |
| ಭೀಮಃ | ೪-೧೫ | ಶಿಪಿವಿಷ್ಟಃ | ೨-೧೦ |
| ಭುಜಙ್ಗಭೂಷಣಃ | ೮-೨೩ | ಶಿವಃ | ೧-೫ |
| ಭೂತಪತಿಃ | ೧೦-೨೫ | ಶಿವಾಪ್ರಿಯಃ | ೩-೧೨ |
| ಮಹಾದೇವಃ | ೧೨-೨೮ | ಶುದ್ಧವಿಗ್ರಹಃ | ೧೧-೨೭ |
| ಮಹಾಸೇನಜನಕಃ | ೧೦-೨೫ | ಶೂಲಪಾಣಿಃ | ೨-೧೦ |
| ಮಹೇಶ್ವರಃ | ೧-೫ | ಶ್ರೀಕಣ್ಠಃ | ೨-೧೦ |
| ಮೃಗಪಾಣಿಃ | ೪-೧೫ | ಸದಾಶಿವಃ | ೭-೨೦ |
| ಮೃಡಃ | ೧೨-೨೮ | ಸರ್ವಜ್ಞಃ | ೬-೧೯ |
| ಮೃತ್ಯುಂಜಯಃ | ೯-೨೪ | ಸಹಸ್ರಪಾತ್ | ೧೩-೨೯ |
| ಯಜ್ಞಮಯಃ | ೭-೨೦ | ಸಹಸ್ರಾಕ್ಷಃ | ೧೩-೨೯ |